# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಸಂಪುಟ:01 • ಸಂಚಿಕೆ:188 • ನೋಂದಣಿ ನಂ.:KARKAN27911 • ವಿಜಯನಗರ • 20.12.2023 • ಬುಧವಾರ • ಪುಟ:04 • ಬೆಲೆ:2
Volume:01 • Issue:188 • Reg.No:KARKAN27911 • VIJAYANAGARA • 20.12.2023 • Wednesday • Page:04 • Rs:2



**Spend LESS and get MORE publicity**

BENEFITS OF ADVERTISING
in Local Leading HAMPI TIMES Newspaper

1. Flexibility
2. Timeliness
3. Affordability
4. Engaged audience
5. Positive response
6. Targeted demographic
7. Trustworthy medium
8. Design options



CALL US : 9448633038

Email us Your Advertisement Content to : hampitimes@gmail.com



ಡಿಸೆಂಬರ್ 23 ಮತ್ತು 24 ರಂದು ಮಧ್ಯ ಕರ್ನಾಟಕದ ಕೇಂದ್ರವಾದ ದಾವಣಗೆರೆಯಲ್ಲಿ ನಡೆಯಲಿರುವ

**ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಮಹಾ ಅಧಿವೇಶನದಲ್ಲಿ**

ವೀರಶೈವ ಲಿಂಗಾಯತ ಸಮಾಜದ ಎಲ್ಲಾ ಒಳ ಪಂಗಡಗಳ ಸಮಾಜ ಬಾಂಧವರು ಬೃಹತ್ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿ.

ಸ್ಥಳ: ಎಂ.ಬಿ.ಎ.ಕಾಲೇಜು ಮೈದಾನ, ದಾವಣಗೆರೆ

ಸ್ವಾಗತ ಕೋರುವವರು: **ಕೆ.ಬಿ.ಶ್ರೀನಿವಾಸ ರೆಡ್ಡಿ** ರಾಜ್ಯ ಕಾರ್ಯದರ್ಶಿ.ಅ.ಭಾ.ವೀ.ಲಿಂಗಾಯತ ಮಹಾಸಭಾ




# ಸಕ್ಕರೆ ಕಾರ್ಖಾನೆ ನಾನೇ ಹಾಕ್ತೀನಿ

**ಶಾಸಕ ಗವಿಯಪ್ಪ ಘೋಷಣೆ | ರೈತರು ಎದೆಗುಂದಬೇಕಿಲ್ಲ | ಸರ್ಕಾರಿ ಭೂಮಿ ಸಿಗದಿದ್ರೆ ಖಾಸಗಿ ಭೂಮಿಯಲ್ಲೆ ಆರಂಭ**

**ಹಂಪಿ ಟೈಮ್ಸ್ ಹೊಸಪೇಟೆ**

ಮಾಜಿ ಸಚಿವ ಆನಂದಸಿಂಗ್ ಮತ್ತು ಶಾಸಕ ಗವಿಯಪ್ಪನ ನಡುವಿನ ಸಕ್ಕರ ಕಾರ್ಖಾನೆ ಹಗ್ಗ ಜಗ್ಗಾಟದಲ್ಲಿ ರೈತರು ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ ಎನ್ನುವ ಪ್ರಶ್ನೆಗೆ ಸರ್ಕಾರದ ಸ್ಥಳ ಸಿಕ್ಕರೆ ಸರಿ ಇಲ್ಲದಿದ್ದರೆ ಖಾಸಗಿ ಭೂಮಿಯಲ್ಲೆ ನಾನೇ ಸಕ್ಕರೆ ಕಾರ್ಖಾನೆ ಹಾಕ್ತಿನಿ ಎಂದು ಶಾಸಕ ಎಚ್.ಆರ್.ಗವಿಯಪ್ಪ ಘೋಷಿಸಿದರು.

ನಗರದ ಪುನೀತ್ ರಾಜ್‌ಕುಮಾರ್ ವೃತ್ತದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಟ್ರಾಫಿಕ್ ಸಿಗ್ನಲ್‌ಗೆ ಚಾಲನೆ ನೀಡಿ ಮಾತನಾಡಿದರು. ಸಕ್ಕರೆ ಕಾರ್ಖಾನೆ ಆರಂಭಕ್ಕೆ ಪೂರ್ವ ಸಿದ್ಧತೆಗಳು ನಡೆಯುತ್ತಿವೆ. ಸಕ್ಕರೆ ಕಾರ್ಖಾನೆ ರಾತ್ರೋರಾತ್ರಿ ಸಿದ್ಧ ಆಗುವಂತಹದ್ದಲ್ಲ. ಕಾಲಾವಕಾಶ ಬೇಕಾಗುತ್ತದೆ. ತಾಲೂಕಿನ ನಾಗೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಸರ್ಕಾರದ ಭೂಮಿಯನ್ನು ಗುರುತಿಸಲಾಗುತ್ತಿದೆ. ಸಕ್ಕರೆ ಕಾರ್ಖಾನೆ ಸ್ಥಾಪನೆ ಕುರಿತು ಸಿಎಂ ಸಿದ್ದರಾಮಯ್ಯನವರೊಂದಿಗೆ ಮಾತುಕತೆ ನಡೆದಿದೆ. ಸರ್ಕಾರದ ಅನುಮತಿಗೆ ಕಾಯುತ್ತಿದ್ದೇವೆ. ಸರ್ಕಾರಿ ಭೂಮಿಗೇ ಏನಾದ್ರೂ ತಾಂತ್ರಿಕೆ ತೊಂದರೆಗಳು ಅಡ್ಡಿಯಾದ್ರೆ ಖಾಸಗಿ ಭೂಮಿಯಲ್ಲಿ ನಾನೇ ಸಕ್ಕರೆ ಕಾರ್ಖಾನೆಯನ್ನು ಆರಂಭಿಸುತ್ತೇನೆ.



ರೈತರು ಕಬ್ಬು ಬೆಳೆಯಲು ಎದೆಗುಂದಬೇಕಿಲ್ಲ. ಈ ಹಿಂದೆ ಹಂಪಿ ಶುಗರ್ಸ್‌ಗೆ ಹೆಸರಿಗೆ ನೀಡಬೇಕೆಂದಿರುವ ಜಾಗದಲ್ಲಿ ಬಡವರಿಗೆ ಆಶ್ರಯ ಮನೆಗೆ ಮೊದಲ ಆದ್ಯತೆ ನೀಡಲಾಗುತ್ತದೆ. ಆ ಭೂಮಿ ಸರ್ಕಾರಿ ಭೂಮಿಯಾಗಿರುವುದರಿಂದ ಖಾಸಗಿಯವರ ಇಚ್ಚೆಗೆ ತಕ್ಕಂತೆ ನೀಡಲು ಬರುವುದಿಲ್ಲ. ಆ ಸ್ಥಳದಲ್ಲೆ ಸಕ್ಕರೆ ಕಾರ್ಖಾನೆ ಆರಂಭಿಸುತ್ತೇವೆ ಎಂದವರಿಗೆ ಮಾತಿನಲ್ಲೆ ತಿರುಗೇಟು ನೀಡಿದರು.

ಹಂಪಿಯ ಅಂಗಳದಂತಿರುವ ಹೊಸಪೇಟೆಯ ಪ್ರವಾಸಿಗರನ್ನು ಸೆಳೆಯುತ್ತಿದೆ. ದಿನದಿನಕ್ಕೂ ಸಂಚಾರ ದಟ್ಟಣೆಯಾಗುತ್ತಿದೆ. ಜನರಲ್ಲಿ ಸಂಚಾರಿ ನಿಯಮಗಳ ಜಾಗೃತಿ ಮೂಡಿಸುವುದರ ಜೊತೆಗೆ ಅಪಘಾತಗಳನ್ನು ತಡೆಯಲು ಸಿಗ್ನಲ್‌ಗಳ ಸಹಕಾರಿಯಾಗುತ್ತವೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು ಅವರು ಈ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಹೆಚ್ಚು ಉತ್ಸುಕತೆಯಿಂದ ಕಾರ್ಯನಿರ್ವಹಿಸಿದ್ದಾರೆ. ವಿಜಯನಗರ ಜಿಲ್ಲೆಗೆ ಸೈಬರ್ ಪೊಲೀಸ್ ಠಾಣೆ ಮತ್ತು ಮಹಿಳಾ ಪೊಲೀಸ್ ಠಾಣೆ ಆರಂಭಿಸುತವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ವಿಜಯನಗರ ಜಿಲ್ಲಾ ಕೇಂದ್ರದಲ್ಲಿ ಕಾಸ್ಟ್ ಆಫ್ ಲಿವಿಂಗ್ ಹೆಚ್ಚಾಗಿದೆ. ಈ ಊರಿಗೆ ಕೆಲಸ ಮಾಡಲು ಬರುವವರು ಇಲ್ಲಿಯ ಬಾಡಿಗೆಗೆ ಬೆದರುತ್ತಿದ್ದಾರೆ. ಜಿಲ್ಲೆಯ ಹೊಸಪೇಟೆ ಹೊರತುಪಡಿಸಿ ಇನ್ನುಳಿದ ತಾಲೂಕುಗಳಲ್ಲಿ ವಿವಿಧ ಇಲಾಖೆಯಲ್ಲಿ ಹೆಚ್ಚಿನ ಸಿಬ್ಬಂದಿಗಳು ಕೆಲಸ ಮಾಡುತ್ತಿದ್ದಾರೆ. ಆದರೆ ಜಿಲ್ಲಾ ಕೇಂದ್ರದಲ್ಲಿ ಸಿಬ್ಬಂದಿಗಳ ಕೊರತೆ ಇದೆ. ಹಂತಹಂತವಾಗಿ ಸರಿಪಡಿಸಲಾಗುವುದು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು, ಸಂಚಾರಿ ಠಾಣೆ ಸಿಪಿಐ ಶ್ರೀನಿವಾಸ ಮೇಟಿ, ಟ್ರಾಫಿಕ್ ಪೊಲೀಸರು ಇತರರು ಇದ್ದರು.

**ಮೈಕ್ರೋ ನ್ಯೂಸ್**

## ಆವಿಷ್ಕಾರ,ನಾವೀನ್ಯತೆ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯಿಂದ ಆವಿಷ್ಕಾರ, ನಾವೀನ್ಯತೆ ಪುರಸ್ಕಾರಕ್ಕಾಗಿ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು 2023–24ನೇ ಸಾಲಿನಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪ್ರೊ. ಯು. ಆರ್.ರಾವ್ ಪುರಸ್ಕಾರ, ಪದವಿ ವಿದ್ಯಾರ್ಥಿಗಳಿಗೆ ಪ್ರೊ. ಎಸ್. ಕೆ.ಶಿವಕುಮಾರ್ ಪುರಸ್ಕಾರ ಮತ್ತು ಜನಸಾಮಾನ್ಯರು ಮತ್ತು ಭೋದಕರಿಗೆ ಕೆ.ಎಸ್.ಟಿ.ಎ. ಪುರಸ್ಕಾರವನ್ನು ನೀಡುತ್ತಿದೆ.

ಅರ್ಜಿ ಸಲ್ಲಿಸಲು 2024ರ ಜನವರಿ 20 ಕೊನೆಯ ದಿನವಾಗಿದ್ದು, ಅರ್ಹತೆ, ಅರ್ಜಿ ಸಲ್ಲಿಸುವ ವಿಧಾನ ಮತ್ತುಇತರೆ ವಿವರಗಳನ್ನು ಅಕಾಡೆಮಿಯ ವೆಬ್ ಸೈಟ್www.kstacademy.inನಲ್ಲಿ ಪಡೆಯಬಹುದಾಗಿದೆ ಎಂದು ಅಕಾಡೆಮಿಯ ಮುಖ್ಯಕಾರ್ಯ ನಿರ್ವಾಹಕ ಅಧಿಕಾರಿ ತಿಳಿಸಿದ್ದಾರೆ.

## ಜ.16 ಶ್ರೀ ಕೆಂಗಳ ದುರುಗಮ್ಮ ದೇವಿಯ ಜಾತ್ರಾಮಹೋತ್ಸವ

**ಹಂಪಿ ಟೈಮ್ಸ್ ಕೊಟ್ಟೂರು**

ಪಟ್ಟಣದ ಆರಾಧ್ಯ ದೇವತೆ ಶ್ರೀ ಕೆಂಗಳ ದುರುಗಮ್ಮ ದೇವಿಯ ಜಾತ್ರಾಮಹೋತ್ಸವ ಜ– 16 ರಿಂದ 18 ರ ವರೆಗೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಲಿ ಎಂದು ಪಟ್ಟಣದ ವಾಲ್ಮೀಕಿ ಸಮುದಾಯದ ದೈವಸ್ಥರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜ–16 ಮಂಗಳವಾರ ಸಂಜೆ, ಬಡಿಗೇರ (ಆಚಾರ್ಯರು) ಮನೆಯಿಂದ ದೇವಿಯ ಉತ್ಸವ ಪ್ರಾರಂಭಗೊಂಡು ಉರುಮೆ ಇತ್ಯಾದಿ ಮಂಗಳ ವಾದ್ಯಗಳ ಮೆರವಣಿಗೆಯೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಭಕ್ತರ ಸಂಭ್ರಮದಲ್ಲಿ ಉತ್ಸವ ಸಾಗಿ ,ದೇವಿಯು ಗರ್ಭಗುಡಿ ಪ್ರವೇಶಿಸುವಳು. ಜ–17 ಬುಧವಾರ ಗಂಗೆಪೂಜೆ ನೆರವೇರಲಿದೆ, ಜ–18ಕ್ಕೆ ಗುರುವಾರ ಹಣ್ಣು–ಹೂ, ಕಾಯಿ ನೈವೇದ್ಯದ ಪೂಜೆಗಳು ಪಟ್ಟಣ ಸಕಲ ಭಕ್ತಾದಿಗಳಿಂದ ಸಲ್ಲುವುದು, ರಾತ್ರಿ ದೇವಿಯ ನಾಮ ಸ್ಮರಣೆ,ಚರಿತ್ರೆ ಸೇರಿದಂತೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದ್ದು, ದೇವಿಯ ಉತ್ಸವ ಮತ್ತು ಕಾರ್ಯಕ್ರಮಗಳಲ್ಲಿ ಪಟ್ಟಣದ ಸಕಲ ಭಕ್ತಾದಿಗಳು ತನು–ಮನ ದನಗಳಿಂದ ಪಾಲ್ಗೊಂಡು ದುರುಗಮ್ಮ ದೇವಿಯ ಕೃಪೆಗೆ ಪಾತ್ರರಾಗಬೇಕೆಂದು ಕೋರಿದ್ದಾರೆ.






# ಚಹಾ ಮಾರಿ ಪ್ರತಿಭಟನೆ

**27 ದಿನಗಳಿಂದ ಅಥಿತಿ ಉಪನ್ಯಾಸಕರ ನಿರಂತರ ಧರಣಿ**




**ಹಂಪಿ ಟೈಮ್ಸ್ ಹೊಸಪೇಟೆ:**

ನಗರದ ರಸ್ತೆ ಬದಿಯಲ್ಲೇ ಚಹ ತಯಾರಿಸಿ, ಮಾರಾಟ ಮಾಡುವ ಮೂಲಕ ಸರ್ಕಾರದ ನಿರ್ಲಕ್ಷ್ಯ ಧೋರಣೆಯನ್ನು ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರು ಕಟುವಾಗಿ ಖಂಡಿಸಿದರು.

ನಗರದ ಶ್ರೀ ಶಂಕರ್ ಆನಂದ್ ಸಿಂಗ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮುಂಭಾಗದಲ್ಲಿ ಸೇವಾ ಭದ್ರತೆಗೆ ಒತ್ತಾಯಿಸಿ ಕಳೆದ 27 ದಿನಗಳಿಂದ ನಿರಂತರ ಪ್ರತಿಭಟನೆ ನಡೆಸುತ್ತಿರುವ ಅಥಿತಿ ಉಪನ್ಯಾಸಕರಿಂದ ಮಂಗಳವಾರ ಚಹ ಮಾರುವ ಮೂಲಕ ಸಾರ್ವಜನಿಕರ ಗಮನ ಸೆಳೆದರು.

ರಾಜ್ಯದಲ್ಲಿರುವ 430 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸುಮಾರು 11 ಸಾವಿರ ಅತಿಥಿ ಉಪನ್ಯಾಸಕರು ಹಲವು ವಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಕನಿಷ್ಠ ವೇತನ ಮತ್ತು ಸೇವಾ ಭದ್ರತೆಯಿಲ್ಲದೇ ಅತಿಥಿ ಉಪನ್ಯಾಸಕರ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿವೆ. ಮತ್ತೊಂದೆಡೆ ಸೆಮಿಸ್ಟರ್ ಪರೀಕ್ಷೆಗಳು ಸಮೀಪಿಸುತ್ತಿದ್ದು, ತರಗತಿಗಳಿಲ್ಲದೇ ವಿದ್ಯಾರ್ಥಿಗಳಿಗೂ ತೊಂದರೆಯಾಗುತ್ತಿದೆ ಎಂದು ದೂರಿದರು.

ಈಗಾಗಲೇ ದೇಶದ ವಿವಿಧ ರಾಜ್ಯಗಳಲ್ಲಿ ಅತಿಥಿ ಉಪನ್ಯಾಸಕರ ಸೇವೆಯನ್ನು ಖಾಯಂಗೊಳಿಸಿ, ವೇತನವನ್ನೂ ಹೆಚ್ಚಿಸಲಾಗಿದೆ. ಕರ್ನಾಟಕದಲ್ಲಿ ಜೆಓಸಿ ವಿಭಾಗ, ಮೊರಾರ್ಜಿ ದೇಸಾಯಿ, ಕಿತ್ತೂರುರಾಣಿ ಚೆನ್ನಮ್ಮ ವಸತಿ ಶಾಲೆ ಮತ್ತು ಕಾಲೇಜುಗಳಲ್ಲಿ ಹೊರಗುತ್ತಿಗೆ ಶಿಕ್ಷಕರು, ಪ್ರಾಚಾರ್ಯರನ್ನು ಸರ್ಕಾರಿ ಸೇವೆಯಲ್ಲಿ ವಿಲೀನಗೊಳಿಸಲಾಗಿದೆ. ಅದರಂತೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರನ್ನು ಸರ್ಕಾರಿ ನೌಕರರನ್ನಾಗಿ ಪರಿಗಣಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.


ಪ್ರತಿಭಟನೆಯಲ್ಲಿ ಸಂಘದ ಪ್ರಮುಖರಾದ ಎ.ಮಲ್ಲಿಕಾರ್ಜುನ, ಡಾ.ಷಣ್ಮುಖಪ್ಪ, ಡಾ.ನಾಗವೇಣಿ ಸೊಸಲೆ, ಎಂ.ಶಿವಮೂರ್ತಿ, ಸೋಮೇಶ ಉಪ್ಪಾರ, ಗಿರಿಜಾ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

# ವಿದ್ಯುತ್ ತಂತಿ ಸ್ಪರ್ಶ, ಕಬ್ಬು ಬೆಂಕಿಗಾಹುತಿ

**ಹಂಪಿ ಟೈಮ್ಸ್ ಹೊಸಪೇಟೆ**

ತಾಲೂಕಿನ ಕಮಲಾಪುರ ವ್ಯಾಪ್ತಿಯ ಸುಮಾರು 9.5 ಎಕರೆ ಗದ್ದೆಯಲ್ಲಿ ಬೆಳೆದು ನಿಂತಿದ್ದ ಕಬ್ಬಿಗೆ ಮಂಗಳವಾರ ಮಧ್ಯಾಹ್ನ ಜೋತಾಡುತ್ತಿದ್ದ ವಿದ್ಯುತ್ ತಂತಿಗಳು ತಗುಲಿದ ಪರಿಣಾಮ 11 ತಿಂಗಳ ಕಬ್ಬು ಬೆಳೆ ಬೆಂಕಿಗಾಹುತಿಯಾಗಿದೆ.

ಕಬ್ಬಿಗೆ ಬೆಂಕಿ ತಗುಲಿದ್ದು ಕಂಡ ಅಯ್ಯಪ್ಪಸ್ವಾಮಿ ಮಾಲಾಧಾರಿಗಳು, ರೈತರು ಆ ಮಾರ್ಗದಲ್ಲಿ ತೆರಳುತ್ತಿದ್ದ ಸಾರ್ವಜನಿಕರು ಬೆಂಕಿ ನಂದಿಸಲು ಯತ್ನಿಸಿ ಅಪಾರ ಪ್ರಮಾಣದ ನಷ್ಟ ತಡೆದರು. ದೇವಮ್ಮನವರಿಗೆ ಸೇರಿದ 2 ಎಕರೆ, ಗೊಗ್ಗ ವಿಶ್ವನಾಥ ಅವರ 2 ಎಕರೆ, ಬಂಡಿ ಪರಮೇಶ್ವರಪ್ಪ ಅವರ 4.5 ಎಕರೆ ಹಾಗೂ ಎಸ್.ಸುಜಾತ ಅವರ 1 ಎಕರೆ ಸೇರಿದಂತೆ 9.5 ಎಕರೆಯಲ್ಲಿ ಬೆಳೆದಿದ್ದ ಕಬ್ಬು ಸುಟ್ಟು ಕರಕಲಾಗಿದೆ. ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ತೆರಳಿ ಬೆಂಕಿ ನಂದಿಸಿ ವಿವರ ಪಡೆದು ದಾಖಲಿಸಿಕೊಂಡರು.



# ಮಕ್ಕಳ ಜೀವರಕ್ಷಣೆಗಿರಲಿ ಆದ್ಯತೆ

**ಎಸ್ಪಿ ಶ್ರೀಹರಿಬಾಬು ಹೇಳಿಕೆ | ಶಾಲಾ ಮಕ್ಕಳನ್ನು ಕರೆದೊಯ್ಯುವ ಆಟೋಚಾಲಕ, ಮಾಲೀಕರಿಗೆ ಸೂಚನೆ**



**ಹಂಪಿ ಟೈಮ್ಸ್ ಹೊಸಪೇಟೆ:**

ಹೊಸ ವರ್ಷ 2024ರ ಆರಂಭದಿಂದ ಆಟೋಗಳಲ್ಲಿ ಶಾಲಾ ಮಕ್ಕಳನ್ನು ಮನಸೋಯಿಚ್ಚೆ ಸಂಖ್ಯೆಯಲ್ಲಿ ತುಂಬಿಕೊಂಡ ಶಾಲೆಗೆ ಕರೆದೊಯ್ಯುವಂತಿಲ್ಲ. ಮಕ್ಕಳ ಸುರಕ್ಷತೆಗೆ ಹೆಚ್ಚಿನ ಅದ್ಯತೆ ನೀಡಬೇಕು. ಸಾರಿಗೆ ನಿಯಮ ಉಲ್ಲಂಘಿಸುವವರ ವಿರುದ್ಧ ಕಠಿಣ ಕ್ರಮಜರುಗಿಸಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು ಬಿ.ಎಲ್. ಆಟೋ ಚಾಲಕ, ಮಾಲೀಕರಿಗೆ ಖಡಕ್ ಸೂಚನೆ ನೀಡಿದರು.

ನಗರದ ಒಳಾಂಗಣ ಕ್ರೀಡಾಂಗಣದ ಸಭಾಂಗಣಲ್ಲಿ ಮಂಗಳವಾರ ಸಂಚಾರ ಸುರಕ್ಷತಾ ಸಪ್ತಾಹದಂಗವಾಗಿ ಜರುಗಿದ ಶಾಲಾ ಕಾಲೇಜುಗಳಿಗೆ ವಿದ್ಯಾರ್ಥಿಗಳನ್ನು ಕರೆ ತರುವ ಖಾಸಗಿ ವಾಹನಗಳ ಮಾಲೀಕರ–ಚಾಲಕರ ಹಾಗೂ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರ ಸಭೆ ಅಧ್ಯಕ್ಷತೆವಹಿಸಿ ಮಾತನಾಡಿದರು. 400ಕ್ಕೂ ಅಧಿಕ ವಾಹನ ಅಪಘಾತಗಳಾಗಿದ್ದು, 250 ಜನತ ಸಾವಿಗೀಡಾಗಿದ್ದಾರೆ. ಖಾಸಗಿ ಶಾಲೆಗಳಿಗೆ ತೆರಳುವ ಮಕ್ಕಳನ್ನು ಆಟೋಗಳಲ್ಲಿ ಕರೆದೊಯ್ಯುತ್ತಿರುವುದು ಕಂಡುಬರುತ್ತಿದೆ. ಈಗಾಗಲೇ ಅಂತವರಿಗೆ ಸಾರಿಗೆ ನಿಯಮಗಳನ್ನು ಪಾಲಿಸಲು ಸೂಚನೆಯನ್ನೂ ನೀಡಲಾಗಿದೆ. ಸೂಚನೆಯನ್ನು ನಿರ್ಲಕ್ಷಿಸಿದರೆ ನಿರ್ದಾಕ್ಷಿಣ್ಯ ಕ್ರಮಜರುಗಿಸಲಾಗುವುದು. ಇಲ್ಲಿ ಮಕ್ಕಳ ಜೀವ ರಕ್ಷಣೆಯು ಮಕ್ಕಳನ್ನು ಕರೆದೊಯ್ಯುವ ಆಟೋ ಚಾಲಕರ ಮೇಲೆಯೂ ಇದೆ ಎಂಬುದನ್ನು ಮರೆಯಬಾರದು. ಆಕಸ್ಮಿಕ ದುರ್ಘಟನೆಗಳಲ್ಲಿ ಮಕ್ಕಳು ಜೀವ ಕಳೆದುಕೊಂಡರೆ ಯಾವ ಪರಿಹಾರವೂ ಮಕ್ಕಳ ಸ್ಥಾನವನ್ನು ತುಂಬಲಾರವು. ಆಟೋ ಚಾಲಕರು ದುಡಿಮೆಯ ಜೊತೆ ಪ್ರಯಾಣಿಕರ ಜೀವ ರಕ್ಷಣೆಗೂ ಆದ್ಯತೆ ನೀಡಬೇಕು. ನಗರದ 13 ಖಾಸಗಿ ಶಾಲೆಗಳಿಗೆ ಖಾಸಗಿ ಆಟೋ ಮತ್ತು ಓಮಿನಿ ವಾಹನಗಳಲ್ಲಿ ಮಕ್ಕಳನ್ನು ಕರೆದೊಯ್ಯುವ ಚಾಲಕರು ಅಗತ್ಯ ದಾಖಲೆಗಳನ್ನು ಶಾಲಾ ಮುಖ್ಯಸ್ಥರಿಗೆ ಮತ್ತು ಸಂಚಾರಿ ಠಾಣೆಗೆ ನೀಡಬೇಕು. ಆಟೋಗಳು

>>2

# ಡಿಫೆಕ್ಟಿವ್ ಸೈಲನ್ಸರ್ ಚಪ್ಪಟೆ

**ಹಂಪಿ ಟೈಮ್ಸ್ ಹೊಸಪೇಟೆ**

ನಗರದಲ್ಲಿ ಶಬ್ಧಮಾಲಿನ್ಯ ಮಾಡಿಕೊಂಡು ಸಂಚರಿಸುತ್ತಿದ್ದ ವಾಹನಗಳ ಅವೈಜ್ಞಾನಿಕವಾಗಿ ಅಳವಡಿಸಲಾಗಿದ್ದ ಸೈಲನ್ಸರ್‌ಗಳನ್ನು ವಶಕ್ಕೆ ಪಡೆದ ಪೊಲೀಸ್ ಇಲಾಖೆ ಮಂಗಳವಾರ ಸಲೈನ್ಸ್‌ರಗಳ ಮೇಲೆ ರೋಡ್ ರೋಲರ್ ವಾಹನ ಓಡಿಸಿ ಜಖಂಗೊಳಿಸಲಾಯಿತು.

ಎಸ್ಪಿ ಶ್ರೀಹರಿಬಾಬು ಬಿ.ಎಲ್. ಮಾಧ್ಯಮದವರೊಂದಿಗೆ ಮಾತನಾಡಿ, ಇಂದಿನ 80 ಸೇರಿ ಒಟ್ಟು 290 ಸೈಲನ್ಸರ್‌ಗಳನ್ನು ವಶಕ್ಕೆ ಪಡೆದು ವಾಹನ ಚಾಲಕರ ವಿರುದ್ಧ ಕ್ರಮಜರುಗಿಸಲಾಗಿದೆ ಎಂದು ಯುವಕರು ಶೋಕಿಗಾಗಿ ವಾಹನಗಳಲ್ಲಿ ಕಂಪನಿಯ ಸೈಲನ್ಸ್‌ರಗಳನ್ನು ಬದಲಿಸಿಕೊಂಡು ಶಬ್ಧಮಾಲಿನ್ಯ ಮಾಡುತ್ತಿದ್ದರು. ಅಂತಹವರ ವಿರುದ್ಧ ಕಣ್ಣಿಡಲಾಗಿದ್ದು ಈಗಾಗಲೆ 400ಕ್ಕೂ ಅಧಿಕ ಪ್ರಕರಣಗಳನ್ನು ಪತ್ತೆ ಹೆಚ್ಚಿ ಕ್ರಮ ಜರುಗಿಸಲಾಗಿದೆ. ಯುವಕರಲ್ಲಿ ಜಾಗೃತಿಯ ಜೊತೆಗೆ ಶಬ್ದಮಾಲಿನ್ಯ ಮಾಡುವ ವಾಹನಗಳಿಗೆ ಕಡಿವಾಣ ಹಾಕಲಾಗಿದೆ. ನಗರದ ಅನೇಕ ಕಡೆ ಸಿಸಿ ಕ್ಯಾಮರಗಳ ಮೂಲಕವೂ ನಿಗಾವಹಿಸಲಾಗುತ್ತಿದೆ ಎಂದರು. ಸಂಚಾರಿ ಠಾಣೆ ಸಿಪಿಐ ಶ್ರೀನಿವಾಸ ಮೇಟಿ ಮತ್ತು ಪೊಲೀಸರು ಇದ್ದರು.



## ವಚನ ಅರಿವು

### ಲಿಂಗೈಕ್ಯರು

**ಉತ್ತರಪಥಕ್ಕೆ ಹೋಗಿ ಮುಕ್ತಿಯನರಿದೆನೆಂಬವರು.**

**ಅರಿಯಲಾರರು ನೋಡಾ.**

**ಭಕ್ತನಾದೆನೆಂಬವರೆಲ್ಲ ಭವಿಗಳಾದರು ನೋಡಾ.**

**ಜಂಗಮವಾದೆನೆಂಬವರೆಲ್ಲ ಜಗಭಂಡರಾದರು ನೋಡಾ.**

**ಲಿಂಗೈಕ್ಯನಾದೆನೆಂಬವರೆಲ್ಲ ಅಂಗವಿಕಾರಿಗಳಾದರು ನೋಡಾ.**

**ಅಮುಗೇಶ್ವರಲಿಂಗವನರಿಯದಜ್ಞಾನಿಗಳ**

**ಲಿಂಗೈಕ್ಯರೆಂದಡೆ ಅಘೋರನರಕ ತಪ್ಪದು.**

**–ಅಮುಗೆ ರಾಯಮ್ಮ**

ಮೋಕ್ಷಸಾಧನೆ ಮಾಡಿಕೊಂಡಿದ್ದೇವೆ ಎನ್ನುವವರು ನಿಜ ದೈವವನ್ನು ಅರಿಯದೆ, ತಮ್ಮೊಳಗಿನ ದೈವವನ್ನು ತಿಳಿಯದೆ, ಮುಕ್ತಿಯ ಮೇಲೆ ಆಸೆ ಇಟ್ಟು ಸಾಧಿಸುವವರು ಅದೇಗೆ ಮುಕ್ತಿ ಪಡೆಯುತ್ತಾರೆ? ಭಕ್ತರೆಂದು ಕೆಲವರು ತಮ್ಮನ್ನು ತಾವು ಕರೆದುಕೊಂಡು ಭಕ್ತಿಯ ಮಾರ್ಗವನ್ನು ತಿಳಿಯದೆ ಭಕ್ತಿಗೆ ಹೊರಗಾಗಿ ಉಳಿದಿದ್ದಾರೆ. ಜಂಗಮವು ನಾವು ಎಂದು ಅವರಿವರ ಬಳಿಗೆ ಹೋಗಿ ಬಣ್ಣದ ಮಾತುಗಳನ್ನಾಡಿ ಅವರಿಂದ ಹಣ, ಕನಕ ಮುಂತಾದ ಕಾಣಿಕೆಗಳನ್ನು ಪಡೆದು ನಿಜಜಂಗಮತ್ವವ ಮರೆತು ತಮ್ಮ ಒಡಲ ಹೊರೆಯುವ ಇಚ್ಛೆಗೆ ತಿರುಗುವವರು ಬರಿ ಭಂಡರಲ್ಲ ಅವರು ಭಂಡರಿಗಿಂತಲೂ ಬಲು ಭಂಡರು. ಇನ್ನು ಕೆಲವರು ತಾವು ಸಾಧಕರೆಂದು ತಮಗೆ ಲಿಂಕೈಕ್ಯವಿದೆ ಎಂದು ಹೇಳುತ್ತ ಜನರನ್ನು ತಮ್ಮತ್ತ ಸೆಳೆದು ತಮ್ಮ ಶ್ರೇಷ್ಠತೆಯ ಭ್ರಮೆಯಲ್ಲಿ ಮೆರೆಯುತ್ತಾರೆ. ಲಿಂಗತತ್ವವೇ ಅಳವಡದೆ ಇಂತಹವರು ಹುಸಿತನದಲ್ಲಿರುವವರು, ಅಜ್ಞಾನಿಗಳು, ಅರಿವು ಕಾಣದ ವಿಕಾರ ಮನಸ್ಥಿತಿಯವರು, ತೋರುಂಬ ಲಾಭಕೋರರಾಗಿತ್ತಾರೆ. ಇಂತಹವರಿಗೆ ಭಕ್ತರು, ಶರಣರು, ಲಿಂಗೈಕ್ಯರು(ಲಿಂಗವೇ ತಾನಾಗುವುದು) ಎನ್ನಲಾಗುವುದಿಲ್ಲ ಎನ್ನುತ್ತಾಳೆ ಶರಣೆ ರಾಯಮ್ಮ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ಮಕ್ಕಳ ಜೀವರಕ್ಷಣೆಗಿರಲಿ ಆದ್ಯತೆ

ಮೊದಲ ಪುಟದಿಂದ

ಬದಲಾದಲ್ಲಿ ಕೂಡಲೇ ಸಂಬಂಧಿಸಿದವರಿಗೆ ಮಾಹಿತಿ ನೀಡಬೇಕು. ಈ ಹಿಂದೆ ಸಮಯದ ಅವಕಾಶ ನೀಡಲಾಗಿದೆ. ಆಟೋ ಚಾಲಕರು ನಿಯಮ ಪಾಲನೆಗೆ ಮತ್ತೊಮ್ಮೆ ಸಮಯ ಕೇಳುವುದು ಸರಿಯಲ್ಲ. ಶಾಲಾ ಮುಖ್ಯಸ್ಥರು ನಿರ್ಲಕ್ಷ್ಯವಹಿಸಿದರೆ ಅವರನ್ನೂ ಹೊಣೆಗಾರರನ್ನಾಗಿ ಮಾಡಲಾಗುತ್ತದೆ. ಶಾಲಾ ಆವರಣದೊಳಗೆ ತೆರಳಿ ಮಕ್ಕಳನ್ನು ಇಳಿಸಬೇಕು ಮತ್ತು ಪಿಕ್‌ಅಪ್ ಮಾಡಬೇಕು. ಶಾಲಾ ಆವರಣದೊಳಗೆ ಮಕ್ಕಳನ್ನು ಹತ್ತಿಸಿಕೊಳ್ಳಲು ಮತ್ತು ಬಿಡಲು ಬೇಕಾದ ಸಮಯದಷ್ಟು ಆಟೋಗಳಿಗೆ ಶಾಲಾ ಮುಖ್ಯಸ್ಥರು ಅವಕಾಶ ಮಾಡಿಕೊಡಬೇಕು. ಶಾಲೆಯ ಆವರಣದಲ್ಲಿ ಆಟೋಚಾಲಕರು ಶಾಂತತೆ ಕಾಯ್ದುಕೊಳ್ಳಬೇಕು. ಮಕ್ಕಳ ಹಿತದೃಷ್ಟಿಯಿಂದ ಕಠಿಣ ಕ್ರಮ ಅಗತ್ಯ ಎಂದರು.

ಸಂಚಾರಿ ಠಾಣೆ ಸಿಪಿಐ ಶ್ರೀನಿವಾಸ ಮೇಟಿ ಇದ್ದರು. ನಗರದ ಆಟೋ ಚಾಲಕರು, ಶಾಲಾ ಮುಖ್ಯಸ್ಥರು ಸಭೆಯಲ್ಲಿ ಭಾಗವಹಿಸಿದ್ದರು.

**ಹಂಪಿ ಟೈಮ್ಸ್**
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com

# ಪ್ರೀತಿಯ ಹಲವು ಮುಖಗಳು






ವೀಣಾ ಹೇಮಂತಗೌಡ ಪಾಟೀಲ್,
ಮುಂಡರಗಿ, ಗದಗ

ಪ್ರೀತಿ ಏಕೆ ಭೂಮಿ ಮೇಲಿದೆ?? ಎಂದ ತಕ್ಷಣ ಬರುವ ಮುಂದಿನ ಸಾಲು ಬೇರೆ ಎಲ್ಲೂ ಜಾಗವಿಲ್ಲದೆ!! ಎಂದು . ಚಲನ ಚಿತ್ರದ ಈ ಗೀತೆ ಖಂಡಿತವಾಗಿಯೂ ನಿಜ. ಏಕೆಂದರೆ ಭೂಮಿಯನ್ನು ಹೊರತುಪಡಿಸಿ ಬೇರೆಲ್ಲೂ ಜೀವ ಸಂಕುಲದ ಉಳಿವಿನ ಅವಶೇಷಗಳು ನಮಗೆ ಪತ್ತೆಯಾಗಿಲ್ಲ .ಚಂದ್ರ ಗ್ರಹ ಮಂಗಳ ಗ್ರಹಗಳಲ್ಲಿ ಜೀವಿಗಳು ಜೀವಿಸಲು ಬೇಕಾದ ಅವಶ್ಯಕತೆಗಳು ಇವೆ ಎಂಬುದೇನೋ ಪತ್ತೆಯಾಗಿದೆ ಆದರೆ ಯಾರಾದರೂ ಜೀವಿಸಿದ್ದರೆ ಎಂದರೆ ನಮಗೆ ಇನ್ನೂ ಅದರ ಬಗ್ಗೆ ಯಾವುದೇ ನಿಖರವಾದ ಮಾಹಿತಿ ಇಲ್ಲ ..ಹಾಗಾಗಿ ಸದ್ಯಕ್ಕೆ ಪ್ರೀತಿ ಏಕೆ ಭೂಮಿ ಮೇಲಿದೆ ಎಂದು ಕೇಳಿದರೆ ಬೇರೆ ಎಲ್ಲೂ ಜಾಗವಿಲ್ಲದೆ ಎಂಬುದೇ ಸರಿ.

ಜಗದ ಸಾಮಾನ್ಯ ಜನರ ಪಾಲಿಗೆ ಪ್ರೀತಿ ಎನ್ನುವುದು ಮಾಯೆಯಾದರೆ ತಾಯಂದಿರ ಪಾಲಿಗೆ ಪ್ರೀತಿ ಮಮತೆಯ ರೂಪ, ಪತಿ– ಪತ್ನಿಯರ ನಡುವಿನ ಪ್ರೀತಿಗೆ ಪ್ರೇಮ, ಅಣ್ಣ ತಮ್ಮಂದಿರ, ಅಕ್ಕ ತಂಗಿಯರ ನಡುವಿನ ಪ್ರೀತಿ ಸಹೋದರ ವಾತ್ಸಲ್ಯ ಎಂದೂ , ಹಿರಿ ಕಿರಿಯರ ನಡುವಿನ ಪ್ರೀತಿಗೆ ವಾತ್ಸಲ್ಯ ಎಂದು ಹೆಸರು. ಕೆಲವೊಮ್ಮೆ ನಮ್ಮ ಪ್ರೀತಿ ಕರುಣೆಯಿಂದಲೂ ಸಾಧ್ಯವಾದರೆ ಇನ್ನೂ ಹಲವು ಬಾರಿ ನಮ್ಮ ಪ್ರೀತಿ ಭಕ್ತಿ ಯಾಗಿಯೂ ಮಾರ್ಪಾಡಾಗುತ್ತದೆ . ಇಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ವಿದ್ಯಾನಂದ ಶೆಣೈಯವರ ಮಾತು ನೆನಪಾಗುತ್ತದೆ. ಜಗತ್ತಿನ ಎಲ್ಲ ರಾಷ್ಟ್ರಗಳು ದೇಶದ ಬಗೆಗಿನ ಪ್ರೀತಿಯನ್ನು ಹೊಂದಿರುವ ವ್ಯಕ್ತಿಯನ್ನು ದೇಶಪ್ರೇಮಿ ಎಂದು ಕರೆದರೆ ಕೇವಲ ನಮ್ಮ ಭವ್ಯ ಭಾರತ ದಲ್ಲಿ ಓರ್ವ ವ್ಯಕ್ತಿ ಹೊಂದಿರಬಹುದಾದ ದೇಶದ ಬಗೆಗಿನ ಅತ್ಯುನ್ನತ ಪರಾಕಾಷ್ಠೆಯ ಪ್ರೀತಿಯನ್ನು, ಅಭಿಮಾನವನ್ನು ದೇಶಭಕ್ತಿ ಎಂದು ಹೇಳುತ್ತಾರೆ . ಅಂದರೆ ದೇಶದ ಬಗೆಗಿನ ಪ್ರೀತಿ, ಅಭಿಮಾನ ಅತ್ಯಂತ ಗರಿಷ್ಠ ಮಟ್ಟದಲ್ಲಿ ಇದ್ದಾಗ ಮಾತ್ರ ಆ ವ್ಯಕ್ತಿ ದೇಶಭಕ್ತ ಎಂದೆನಿಸಿಕೊಳ್ಳಬಲ್ಲ .ಹಾಗೆ ದೇಶಕ್ಕಾಗಿ ತಮ್ಮ ಜೀವವನ್ನೇ ಒತ್ತೆಯಿಟ್ಟು ಸಹಸ್ರಾರು ಸಂಖ್ಯೆಯ ದೇಶಭಕ್ತರ ಪ್ರೀತಿಯ ನಾಡು ನಮ್ಮದು. ಹಾಗಾದರೆ ಪ್ರೀತಿ ಎಂಬುದು ಕೇವಲ ಒಂದು ಆಯಾಮದಿಂದ ನೋಡುವ ವಿಷಯವಲ್ಲ.ಪ್ರೀತಿ ಎಂಬುದು ಕೇವಲ ಗಂಡು ಹೆಣ್ಣಿನ ಮಧ್ಯದ ಬಾಂಧವ್ಯ, ಹಾರ್ಮೋನುಗಳ ತುಡಿತ , ಹದಿಹರೆಯದ ಮಿಡಿತ ಎಂದು ನಾವು ತಿಳಿದರೆ ನಮ್ಮಷ್ಟು ಮೂರ್ಖರು ಬೇರಾರೂ ಇಲ್ಲ .ಪ್ರೀತಿ ದೈವಿಕ , ಪ್ರೀತಿ ಕಾಳಜಿಯನ್ನು, ಕರುಣೆಯನ್ನು ,ಮಮತೆಯನ್ನು, ವಾತ್ಸಲ್ಯವನ್ನು ಬೇಡುತ್ತದೆ. ತನ್ನ ಯಾವುದೇ ಕೆಲಸಗಳನ್ನು ಮಾಡಿಕೊಳ್ಳಲು ಸಾಧ್ಯವಿಲ್ಲದ ಹಸುಗೂಸಿಗೆ ಹೊಟ್ಟೆ ತುಂಬಿಸುವ ,ಮಲಮೂತ್ರಾದಿಗಳನ್ನು ತೊಳೆಯುವ, ಬಳಿಯುವ ಮಗುವನ್ನು ಸಿಂಗರಿಸಿ, ಮುದ್ದು ಮಾಡುವ, ಪೊರೆಯುವ ಪ್ರೀತಿ ತಾಯಿಯ ಮಮತೆ ವಾತ್ಸಲ್ಯದ ಪ್ರತೀಕ .ಅಲ್ಲಿ ತಾಯಿಯೇ ಆಗಬೇಕೆಂದಿಲ್ಲ ,ತಾಯಿ ಮನಸ್ಸಿನ ತಂದೆ, ಅಜ್ಜ, ಅಜ್ಜಿ, ಅತ್ತೆ, ಜೀವ ಜಗತ್ತಿನ ಯಾರಾದರೂ ಆಗಬಹುದು ಅದು ಪ್ರೀತಿ ಎಂದೆನಿಸಿಕೊಳ್ಳುತ್ತದೆ .ಆದರೂ ತಾಯಿಯ ಪ್ರೀತಿಯನ್ನು ಎಲ್ಲರೂ ಜಗತ್ತಿನ ಮಹಾನ್ ಪ್ರೀತಿ ಎಂದು ಹೇಳುತ್ತಾರೆ.ನಮ್ಮ ಹಿಂದಿನ ಹಿರಿಯರಂತೂ ತಾಯಿ ಮತ್ತು ಮಗುವಿನ ಮಧ್ಯದ ಪ್ರೀತಿಯನ್ನ ವಾತ್ಸಲ್ಯದ ಮಹಾಕಾವ್ಯ ಎಂದು ಕರೆದರು ಏಕೆ ಗೊತ್ತೆ ??? ತಾಯಿಯ ಪ್ರೀತಿಯಲ್ಲಿ ಸ್ವಾರ್ಥದ ಸುಳಿವಿಲ್ಲ ,ಅದು ನಿಸ್ವಾರ್ಥ,ನಿರ್ವ್ಯಾಜ್ಯ ಪ್ರೇಮ. ದಿನದ ಇಪ್ಪತ್ತನಾಲ್ಕು ಗಂಟೆಯನ್ನು ತನ್ನ ಮಗುವಿಗಾಗಿ ಮೀಸಲಿಡುವ ತಾಯಿ ಹಗಲು –ರಾತ್ರಿ , ತಿಂಗಳು– ವರ್ಷಗಟ್ಟಲೆ ಮಗುವಿನ ಆರೈಕೆ ಮಾಡಿದಾಗ ಮಾತ್ರ ಮಗು ಬೆಳೆಯುತ್ತದೆ .ಹೀಗೆ ಬೆಳೆಸುವಾಗ ಆಕೆ ಕೆಲವೊಮ್ಮೆ ಸಿಡಿಮಿಡಿಗುಟ್ಟಬಹುದು, ಜರ್ಜರಿತಳಾಗಬಹುದು, ಕೂಗಾಡಬಹುದು ಆದರೂ ತನ್ನ ಮಮತೆಯನ್ನ ಬಿಟ್ಟುಕೊಡಳು. ಆದ್ದರಿಂದಲೇ ಆ ದೇವಾಧಿದೇವ ಮಹಾದೇವನು ಹೆಣ್ಣನ್ನು ಮಾತೃ ಸ್ವರೂಪಿ, ಜಗದಂಬೆ ಜಗನ್ಮಾತೆ ಎಂದು ಕರೆದನು. ಇಡೀ ಜಗತ್ತನ್ನು ಪ್ರೀತಿಸುವಷ್ಟು ಮಮತೆಯ ಕಡಲನ್ನು ತನ್ನಲ್ಲಿಟ್ಟು ಪೊರೆಯುತ್ತಾಳೆ ತಾಯಿ . ಮಮತೆಯ ಮಹಾವಾರಿಧಿ ಆಕೆ .

ಇನ್ನು ತಂದೆ ಮಕ್ಕಳ ಪ್ರೀತಿ ...ಕೆಲ ದಶಕಗಳ ಹಿಂದೆ ಕೂಡ ತಂದೆಮಕ್ಕಳ ಮಧ್ಯದಲ್ಲಿ ಅಷ್ಟೊಂದು ಹಾರ್ದಿಕವಾದ ಬಾಂಧವ್ಯ ಇರುತ್ತಿರಲಿಲ್ಲ ಕಾರಣವಿಷ್ಟೆ ಅಮ್ಮನ ರಕ್ಷೆ ಅಪ್ಪನ ಶಿಕ್ಷೆ ಎಂಬ ರೂಢಿಬದ್ಧ ನಿಯಮ .(ಬಹುಶಃ ಇಂದು ಅದು ತಿರುಗುಮುರುಗಾಗಿ ರಲೂಬಹುದು ).ಹಿಂದಿನ ಕಾಲದಲ್ಲಿ ಅಂದರೆ ಕೇವಲ ಐವತ್ತು–ಅರುವತ್ತು ವರ್ಷಗಳ ಹಿಂದೆ ತಿರುಗಿ ನೋಡಿದರೆ ಅಪ್ಪ ಮನೆಗೆ ಬಂದರೆ ಗಲಾಟೆ ಮಾಡುತ್ತಿದ್ದ ಎಲ್ಲಾ ಮಕ್ಕಳು ಗಪ್ ಚಿಪ್ . ಪುಸ್ತಕ ಹಿಡಿದು ಓದಲು ಕೂತಿರುವ ಮಕ್ಕಳು, ತನ್ನ ಪಾಡಿಗೆ ತಾನು ಮನೆಕೆಲಸ ಮಾಡುತ್ತಿರುವ ಅಮ್ಮ ಮತ್ತು ಮನೆಯ ಇನ್ನಿತರ ಸದಸ್ಯರು, ಸೂಜಿಬಿದ್ದರೂ ಶಬ್ದ ಕೇಳಿಸೀತು ಎನ್ನುವಂತಹ ಮನೆಯ ವಾತಾವರಣ ಆ ಮನೆಯಲ್ಲಿ ತಂದೆಯ ಉಪಸ್ಥಿತಿಯನ್ನು ಸೂಚಿಸುತ್ತಿತ್ತು. ತಂದೆಯ ಕುರಿತು ಭಯ,ಗೌರವವೇ ಪ್ರೀತಿಯ ಇನ್ನೊಂದು ಮುಖದ ಭಾವವಾಗಿರುತ್ತಿತ್ತು .ಮಕ್ಕಳಿಗೆ ತಂದೆಯ ಬಳಿ ಏನನ್ನಾದರೂ ಕೇಳಬೇಕಾದರೆ ಅಮ್ಮನೇ ಮಧ್ಯವರ್ತಿ .ಅಮ್ಮನನ್ನೇ ಕಾಡಿ–ಬೇಡಿ ತಂದೆಯ ಬಳಿ ಕೆಲಸ ಗಿಟ್ಟಿಸಿಕೊಳ್ಳುತ್ತಿದ್ದದ್ದು. ಆದರೆ ಕೌಟುಂಬಿಕ ಮೌಲ್ಯಗಳು ಬದಲಾಗುತ್ತಿರುವ ಇಂದಿನ ಕಾಲದಲ್ಲಿ ತಂದೆ ಓರ್ವ ಸ್ನೇಹಿತನಂತೆ, ಮಾರ್ಗದರ್ಶಿಯಂತೆ ತೋರುತ್ತಿದ್ದಾರೆ ಎಂಬುದು ಕೂಡ ಅತ್ಯಂತ ಸ್ವಾಗತಾರ್ಹ.ಈಗ ಅಮ್ಮನ ಬಳಿ ಹೇಳಿಕೊಳ್ಳದ ಹಲ ಕೆಲವು ವಿಷಯಗಳನ್ನು ಮಕ್ಕಳು ತಂದೆಯ ಬಳಿ ನಿಸ್ಸಂಕೋಚವಾಗಿ, ಸರಾಗವಾಗಿ ಹೇಳಿಕೊಳ್ಳಬಲ್ಲರು,ವಾದಿಸಬಲ್ಲರು. ಅಪ್ಪಂದಿರೂ ಅಷ್ಟೇ .. ಮುಂಚಿನ ಅಪ್ಪಂದಿರಂತೆ ಅಲ್ಲದೆ ತಮ್ಮ ಮಕ್ಕಳ ಜೊತೆ ಸಹಜವಾಗಿ, ಅಷ್ಟೇ ಸರಾಗವಾಗಿ ಬೆರೆತು ಅವರ ಇಷ್ಟಾನಿಷ್ಟಗಳಿಗೆ ಕಿವಿಯಾಗುತ್ತಾರೆ , ಅವರ ಬೇಕು ಬೇಡಗಳಿಗೆ ,ಅವರ ಒಳಿತು ಕೆಡುಕುಗಳಿಗೆ ಕಣ್ಣಾಗುತ್ತಾರೆ ಅವರ ತಪ್ಪು ಸರಿಗಳನ್ನು ನಿಷ್ಟುರತೆ ಎಂಬ ತಕ್ಕಡಿಯಲ್ಲಿ ತೂಗದೆ ನಿಧಾನವಾಗಿ ಪರಾಮರ್ಶೆ ಮಾಡಿ ಸಮಾಧಾನವಾಗಿ ತಿಳಿ ಹೇಳುವ ತಾಳ್ಮೆಯ ದ್ರಷ್ಟಾರರಾಗಿದ್ದಾರೆ ... ಅಂತೆಯೇ ಇಂದು ಅಪ್ಪಂದಿರನ್ನು ಎರಡನೇ ತಾಯಿ ಎಂದೆನುವ ಕಾಲ ಬಂದಿದೆ .ಇದು ಕೂಡ ಪ್ರೀತಿಯ ಬದಲಾದ ರೂಪ.

ಇನ್ನು ಮಗುವಾಗಿ ತನ್ನ ಶೈಶವಾವಸ್ಥೆಯನ್ನ ಪೂರೈಸಿ, ಹದಿಹರೆಯಕ್ಕೆ ಕಾಲಿಟ್ಟಾಗ ಕೂಡ ತಂದೆ ಅವರಿಗೆ ಒಳ್ಳೆಯ ಸ್ನೇಹಿತನಾಗುತ್ತಾನೆ, ಹೆಣ್ಣುಮಕ್ಕಳಿಗಂತೂ ಅವರಪ್ಪ ಅವರ ಮೊದಲ ಪ್ರೀತಿ , ಮೊದಲ ಹೀರೋ,ಮೊದಲ ದೈವ. ಈ ವಿಷಯದಲ್ಲಿ ಕೊಂಚ ಗಂಡು ಮಕ್ಕಳು ತಾಯಿಯ ಸೆರಗು ಹಿಡಿಯುವುದೇ ಹೆಚ್ಚು , ತಂದೆಯ ಬಳಿ ಗಂಡು ಮಕ್ಕಳು ತಮ್ಮ ಹದಿಹರೆಯದಲ್ಲಿ ಕೊಂಚ ಬಿಗುಮಾನದಿಂದ ಇರುವುದು ಕೂಡ ಕಂಡುಬರುತ್ತದೆ .ಇಲ್ಲಿ ಪ್ರೀತಿ ಬಿಗುಮಾನದ ರೂಪದಲ್ಲಿ ವ್ಯಕ್ತವಾಗುತ್ತದೆ. ಇನ್ನು ಶಾಲೆಗಳಲ್ಲಿ ಮಕ್ಕಳು ತಮ್ಮ ಶಾಲೆಯನ್ನು, ಸಹಪಾಠಿಯನ್ನು, ಶಿಕ್ಷಕರನ್ನು ಆತ್ಮೀಯವಾಗಿ ಹಚ್ಚಿಕೊಳ್ಳುತ್ತಾರೆ. ಬೇಕಾದರೆ ಯಾರನ್ನಾದರೂ ಕೇಳಿ ನೋಡಿ 'ನಿಮ್ಮ ಅತ್ಯಂತ ನೆಚ್ಚಿನ ಗುರುಗಳು, ಮೆಚ್ಚಿನ ಸ್ನೇಹಿತರು ಯಾರು'?? ಎಂದು ಕೇಳಿದರೆ ಸಿಗುವ ಉತ್ತರ ಅವರ ಪ್ರಾಥಮಿಕ ಶಾಲೆಯ ಶಿಕ್ಷಕರೇ! . ಕಾರಣ ಅತ್ಯಂತ ಸರಳ ಹಾಗೂ ಸ್ಪಷ್ಟ. ಮೊತ್ತ ಮೊದಲು ಮನೆಯ ಚೌಕಟ್ಟನ್ನು ದಾಟಿ ಮಗು ಹೊರ ಬಂದಾಗ ಅದಕ್ಕೆ ಸಿಗುವ ಪರಿಸರವೇ ಶಾಲೆ .ಅಲ್ಲಿ ಮೌಲ್ಯಗಳನ್ನು ಕಥೆಯ ಮೂಲಕ, ಹಾಡಿನ ಮೂಲಕ, ಪಾಠದ ಮೂಲಕ ಹೇಳಿಕೊಡುವ, ಮಗುವನ್ನು ಒಬ್ಬ ಉತ್ತಮ ಪ್ರಜೆಯನ್ನಾಗಿಸುವ ಕಾಯಕ ಮಾಡುವ ಶಿಕ್ಷಕ ಮಕ್ಕಳಿಗೆ ಅತ್ಯಂತ ಪ್ರೀತಿಪಾತ್ರನಾಗುತ್ತಾನೆ. ತಿದ್ದಿ, ತೀಡಿ,ಮುದ್ದು ಮಾಡಿ ಶಿಕ್ಷೆ ನೀಡಿ ಹೇಗಾದರೂ ಹೇಳಲಿ ಶಿಕ್ಷಕ ಮಗುವಿನ ಮೊತ್ತ ಮೊದಲ ಕುಟುಂಬದ ಹೊರಗಿನ ಪ್ರೀತಿ. ಜೊತೆಗೆ ಸಹಪಾಠಿಗಳು ಮಗುವಿಗೆ ಅತ್ಯಂತ ಆತ್ಮೀಯರಾಗುತ್ತಾರೆ. ಇಲ್ಲಿಯೂ ಕೂಡ ಮಗು ಹೊಸದಾದ, ಸುರಕ್ಷಿತವಾದ ಸುಮಧುರ ಸಂಬಂಧವನ್ನ ,ಮನೆಯ ಹೊರಗೆ ಕಂಡುಕೊಳ್ಳಲು ತನ್ನದೇ ವಯಸ್ಸಿನ ಸ್ನೇಹಿತರನ್ನು ಹೊಂದುವುದು ಗೆಳೆತನವನ್ನು ನಿಭಾಯಿಸುವುದು ಪ್ರೀತಿಯ ಮತ್ತೊಂದು ರೂಪ . ಪ್ರೌಢ ಮತ್ತು ಹದಿಹರೆಯದ ಅವಸ್ಥೆಯಲ್ಲಿ, ಕಾಲೇಜು ಸಮಯದಲ್ಲಿ ಮಕ್ಕಳು ಪರಸ್ಪರ ವಿರುದ್ಧ ಲಿಂಗಿಗಳ ಆಕರ್ಷಣೆ ಹೊಂದುವುದು ಸಹಜವಾದದ್ದು. ಆದರೆ ಇದು ಅಪೇಕ್ಷಣೀಯವಲ್ಲ ಎಂಬುದು ಸಮಾಜಿಕ ತಿಳುವಳಿಕೆ .ಆದರೆ ಈ ಪ್ರೀತಿ ಎಂಬುದು ಮಾಯೆ ಎಂಬುದು ಸ್ಪಷ್ಟವಾಗುವುದು ಈ ಹದಿಹರೆಯದಲ್ಲಿಯೇ .ಅರಿಯದ ವಯಸ್ಸು, ಕೇಳದ ಮನಸ್ಸು ಮಗುವನ್ನು ಪ್ರೀತಿಯ ಬಲೆಗೆ ದೂಡಬಹುದು ..ಹಾಗೆಂದು ಆ ಪ್ರೀತಿಯ ಆಯಸ್ಸು ತುಂಬ ಕಡಿಮೆ .ಅರಿವಿನ ಕೊರತೆ , ವಯೋ ಸಹಜ ಆಕರ್ಷಣೆಗಳಿಗೆ ಹಲವರು ತುತ್ತಾಗಬಹುದು ,ಮುಂದೆ ಅದೊಂದು ಮಧುರಾನುಭೂತಿ ಯಾಗಿ ಜೀವನಪೂರ್ತಿ ಅವರನ್ನು ಕಾಡಬಲ್ಲದು ....ಆದರೆ ಅದನ್ನು ಕೇವಲ



ಆಕರ್ಷಣೆ ಎಂದಲ್ಲದೆ ಪ್ರೀತಿ ಎಂದು ಹೇಳಲಾಗುವುದಿಲ್ಲ. ಕೆಲವೊಮ್ಮೆ ಈ ಆಕರ್ಷಣೆಯ ಮೂಲಕವೇ ಆರಂಭವಾದ ಪ್ರೀತಿ ಗಟ್ಟಿಯಾಗಿ ಹೆಮ್ಮರವಾಗಿ ಮನೆಯವರೆಲ್ಲರನ್ನು ಒಪ್ಪಿಸಿ ಅಥವಾ ಒಪ್ಪಿಸಲು ಸಾಧ್ಯವಾಗದೆ ಇದ್ದಾಗಲೂ ಕೂಡ ಮದುವೆ ಎಂಬ ಬಂಧನದಲ್ಲಿ ಒಂದಾಗುವುದು ಪ್ರೀತಿಯ ಇನ್ನೊಂದು ಗಟ್ಟಿತನದ ರೂಪ.

ಮುಂದೆ ಬರುವ ಘಟ್ಟವೇ ಮನುಷ್ಯನ ಜೀವನದ ಅತ್ಯಂತ ಪ್ರಮುಖ ಘಟ್ಟ .ಒಂದು ಹಂತದ ವಿದ್ಯಾಭ್ಯಾಸ ಮುಗಿಸಿ ಸಂಪಾದನೆಯ ದಾರಿಯನ್ನು ಹಿಡಿದ ಮಕ್ಕಳಿಗೆ ಮದುವೆ ಎಂಬ ಸುಮಧುರ ಸಾಂಸಾರಿಕ ಬಂಧಕ್ಕೆ, ಸಾಮಾಜಿಕ ಬದ್ಧತೆಗೆ ತೊಡಗಿಸುವುದು. ಇಲ್ಲಿ ಗಂಡು–ಹೆಣ್ಣು ಪರಸ್ಪರ ಅವಲಂಬನೆ, ಸಹಬಾಳ್ವೆ, ಹೊಂದಾಣಿಕೆ, ಪ್ರೀತಿ– ವಿಶ್ವಾಸಗಳ ಬಂಧನದಲ್ಲಿ ಒಂದಾಗುತ್ತಾರೆ. ನಮ್ಮ ಭಾರತೀಯ ಪರಂಪರೆಯಲ್ಲಂತೂ ವಿವಾಹವೆ0ಬುದು ಶ್ರೇಷ್ಠ ವಿಧಿ.ಮದುವೆಗಳು ಸ್ವರ್ಗದಲ್ಲಿಯೇ ನಿಶ್ಚಯವಾಗಿರುತ್ತದೆ ಎಂಬುದು ಪ್ರಪಂಚದ ಸಾರ್ವಕಾಲಿಕ ಹೇಳಿಕೆ. ಹಾಗೆಯೇ ವಿವಾಹ ಎಂಬುದು ಗಂಡು ಹೆಣ್ಣುಗಳಿಗೆ ಸಾಮಾಜಿಕ ಬಂಧನವನ್ನು, ಚೌಕಟ್ಟನ್ನು, ತನ್ಮೂಲಕ ಪ್ರೀತಿಯ ಮತ್ತೊಂದು ದರ್ಶನವನ್ನು ಮಾಡಿಸುತ್ತದೆ. ಇಲ್ಲಿ ಪ್ರೀತಿಯ ಪರಾಕಾಷ್ಠೆಯನ್ನೇ ಪ್ರೇಮ ಎಂದು ಕರೆಯಬಹುದು . ನಿಷ್ಕಾಮ ಪ್ರೇಮ ಎಂಬ ಮಾತೊ0ದು ಅಲ್ಲಲ್ಲಿ ಕೇಳಬರುತ್ತದೆ .ಹಾಗಾದರೆ ನಿಷ್ಕಾಮ ಪ್ರೇಮ ಎಂದರೆ ಏನು ??? ಹಲವರು ಹೇಳುವಂತೆ ಹಲವಾರು ವ್ಯಾಖ್ಯಾನಗಳು ಪ್ರೇಮಕ್ಕೆ ಇದ್ದರೂ ಅಂತಿಮವಾಗಿ ಪ್ರೇಮ ಎಂಬುದು....ತನ್ನ ಜೊತೆಗಿನ ವ್ಯಕ್ತಿಯ ಎಲ್ಲಾ ಒಳಿತು – ಕೆಡುಕು, ಸರಿ –ತಪ್ಪುಗಳನ್ನು ಒಳಗೊಂಡಂತೆಯೇ ನೀವು ಒಬ್ಬ ವ್ಯಕ್ತಿಯನ್ನು ಪ್ರೀತಿಸುವುದಾದರೆ ಅದು ನಿಷ್ಕಾಮ ಪ್ರೇಮ . ಅಲ್ಲಿ ಯಾವುದೇ ರೀತಿಯ ನಿರೀಕ್ಷೆಗಳು ,ಭರವಸೆಗಳು ಸಲ್ಲದು .ನೀ ನನಗಿದ್ದರೆ ನಾ ನಿನಗೆ ಎಂಬ ವ್ಯಾವಹಾರಿಕ ಭಾವ ವರ್ಜ್ಯ. ಅಂತೆಯೇ ರಾಧಾ ಕೃಷ್ಣರ ಪ್ರೀತಿ ಇಂದಿಗೂ ಜಗಜ್ಜನಿತ. ಅವರ ಪ್ರೀತಿ ನಿಷ್ಕಾಮವಾದುದು. ಯಾವತ್ತೂ ಪ್ರೇಮವನ್ನೇ ಬಯಸಿದ್ದ ಆಂತರಂಗಿಕ ಗೆಳೆತನ. ಅಲ್ಲಿ ಕಾಮನೆಗಳಿಗೆ ಅವಕಾಶವಿರಲಿಲ್ಲ. ಒಂದು ರೀತಿಯ ಪ್ಲೆಟಾನಿಕ್ ಎಂದು ಇಂಗ್ಲಿಷಿನಲ್ಲಿ ಬಳಸಬಹುದಾದ ರೀತಿಯ ನವಿರು ಪ್ರೇಮ. ಪ್ರೀತಿಯ ಇಂಥ ಉತ್ಕಟ ರೂಪವೇ ಪ್ರೇಮ. ತನ್ನ ಪ್ರೀತಿ ತನ್ನ ಜೊತೆಗೆ ಜೀವಿತದ ಕೊನೆಯವರೆಗೆ ಇರಬೇಕೆಂಬ ಸ್ವಾರ್ಥ ಕೂಡ ರಾಧಾ–ಕೃಷ್ಣರಲ್ಲಿ ಇರಲಿಲ್ಲ. ಪರಸ್ಪರ ಏಳಿಗೆಗಾಗಿ ತಮ್ಮ ಪ್ರೀತಿಯನ್ನು ಬಿಟ್ಟುಕೊಟ್ಟ ತನ್ಮೂಲಕ ಅಮರ ಪ್ರೇಮಿಗಳಾದವರು ರಾಧಾ–ಕೃಷ್ಣರು .ಅವರು ಪತಿ ಪತ್ನಿಯರಲ್ಲ...ಆದರೆ ದಾಂಪತ್ಯವನು ಮೀರಿದ ಸಾಂಗತ್ಯ ಅವರಿಬ್ಬರದಾಗಿದ್ದರಿಂದಲೇ ಅವರು ಇಂದಿಗೂ ಪೂಜನೀಯರು. ಹದಿಹರೆಯದ ಕಾವಿನಲ್ಲಿ ಯಾವುದೋ ಆಕರ್ಷಣೆಗೆ ಒಳಪಟ್ಟು ಒಬ್ಬರನ್ನು ಪ್ರೀತಿಸಿ, ಆ ಪ್ರೀತಿಯನ್ನು ಇನ್ನೊಬ್ಬರು ತಿರಸ್ಕರಿಸಿ ದಾಗ ಅವರ ಮೇಲೆ ದೈಹಿಕ ಹಲ್ಲೆಗಳು ,ಎಸಿಡ್ ದಾಳಿ ಯ0ತಹ ಕ್ಷುಲ್ಲಕ, ಅಮಾನವೀಯ ಘಟನೆಗಳಿಗೆ ತಮ್ಮನ್ನು ತಾವು ಒಡ್ಡಿಕೊಳ್ಳುವ ಹದಿಹರೆಯದವರು ಪ್ರೇಮದ ಪೂಜಾರಿಗಳಲ್ಲ ..ಬದಲಾಗಿ ಪ್ರೇಮದ ಪಾತಕಿಗಳು. ಪ್ರೇಮ ತ್ಯಾಗವನ್ನು ಕೂಡ ಬಯಸುತ್ತದೆ ಎಂಬ ಕನಿಷ್ಠ ಸತ್ಯವನ್ನು ಅರಿಯದ ಕ್ಷುದ್ರ ಜೀವಿಗಳು . ತಾನು ಪ್ರೀತಿಸುವ ವ್ಯಕ್ತಿ ಎಲ್ಲೇ ಇರಲಿ ಹೇಗೆ ಇರಲಿ, ಸುಖವಾಗಿ ಇರಲಿ ಎಂಬುದು ನೈಜ ಪ್ರೀತಿಯ ಲಕ್ಷಣ. ಮುಂದೆ ಮಕ್ಕಳು, ಮರಿ, ಮನೆ ಕೆಲಸ , ಉದ್ಯೋಗ, ಸಾಂಸಾರಿಕ ಜೀವನ, ಕೌಟುಂಬಿಕ ಜವಾಬ್ದಾರಿಗಳು ಒಂದು ಹಂತಕ್ಕೆ ಬಂದಾಗ ಪತಿ–ಪತ್ನಿಯರ ಮದ್ಯದಲ್ಲಿರುವ ಹಲವಾರು ಭಿನ್ನಾಭಿಪ್ರಾಯಗಳು,ವಯೋ ಸಹಜ ಹರೆಯದ ಆಸೆ–ಆಕಾಂಕ್ಷೆಗಳು, ಕಾಮನೆಗಳು, ಸಿಟ್ಟು–ಸೆಡವುಗಳು, ಕಾರಣವೇ ಇಲ್ಲದೆ ಕಿರಿಕಿರಿಗಳು ,ಪರಸ್ಪರರ ಅವಶ್ಯಕತೆಯ, ಸಮಯ ಬೇಡುವ ಒಂದು ರೀತಿಯ ಪೊಸೆಸ್ಸಿವ್ ನೆಸ್ ಕಡಿಮೆಯಾಗಿ ಮಾಗಿದ ಪ್ರೇಮ ದಂಪತಿಗಳದಾಗುತ್ತದೆ. ಪರಸ್ಪರಾವಲಂಬನೆ , ಪ್ರೇಮದ ಬಂಧನ, ಕುಟುಂಬದ ಜವಾಬ್ದಾರಿಗಳು ಅವರನ್ನು ಇನ್ನಷ್ಟು, ಮತ್ತಷ್ಟು ಹತ್ತಿರಕ್ಕೆ ತರುತ್ತದೆ. ಹರೆಯದಲ್ಲಿ ಸಂಗಾತಿ ದೈಹಿಕವಾಗಿ ಹತ್ತಿರವಾದರೆ, ವಯಸ್ಸಾದಂತೆ ಮಾನಸಿಕವಾಗಿ, ಭಾವನಾತ್ಮಕವಾಗಿ ಪರಸ್ಪರ ಇನ್ನಷ್ಟು ಆಪ್ತರಾಗುತ್ತಾರೆ. ಮುಪ್ಪಾದಂತೆ ಪರಸ್ಪರ ಅವಲಂಬನೆ ಒಂದೇ ದೇಹ ಎರಡು ಜೀವ, ಏಕ ಭಾವ ಎಂಬಂತೆ ಆಗುತ್ತಾರೆ ಆಗಬೇಕು ಕೂಡ. ಆದರೆ ಎಲ್ಲರಿಗೂ ಈ ಪ್ರೇಮ ಮರೀಚಿಕೆಯೇ ಸರಿ.ಕೆಲವರಿಗೆ ದಾಂಪತ್ಯದಲ್ಲಿ ಪ್ರೇಮ ಸಿಗದೇ ಹೋದಾಗ ವಿರಸ , ನೋವು ನಿರಾಶೆ ಸಹಜ .ಇನ್ನು ಪರಸ್ಪರ ಹೊಂದಾಣಿಕೆ ಸಾಧ್ಯವೇ ಇಲ್ಲ ಎಂಬಂತಹ ಪರಿಸ್ಥಿತಿಯಲ್ಲಿಯೂ ಕೂಡ ನಮ್ಮ ಹಿಂದಿನ ಜನರು ಕೌಟುಂಬಿಕ ಚೌಕಟ್ಟಿನಲ್ಲಿ ತಮ್ಮ ಜೀವನವನ್ನು ಸವೆಸಿಬಿಡುತ್ತಿದ್ದರು ಕೂಡ. ಕೌಟುಂಬಿಕ ಜೀವನಕ್ಕಿರುವ, ಸಾಮಾಜಿಕ ಬದುಕಿಗಿರುವ ತಾಕತ್ತು ಕೂಡ ಅದೇ ಕೌಟುಂಬಿಕ ಪ್ರೀತಿ. ಆದರೆ ಇಂದು ಪರಿಸ್ಥಿತಿ ಹಾಗಿಲ್ಲ ,ಹೊಂದಾಣಿಕೆಯ ಬದುಕು ಸಾಧ್ಯವಾಗದೇ ಹೋದಾಗ ಪರಸ್ಪರ ಗೌರವಪೂರ್ವಕವಾಗಿ ವಿಚ್ಛೇದನ ಹೊಂದಿ ತಮ್ಮ ಪಾಡಿಗೆ ತಾವು ಜೀವನ ಸಾಗಿಸುತ್ತಾರೆ .ಇದು ಕೂಡ ಆತ್ಮಗೌರವದ, ಸ್ವಯಂ ಪ್ರೀತಿಯ ಲಕ್ಷಣ .ಬದಲಾಗುತ್ತಿರುವ ಕಾಲಮಾನದಲ್ಲಿ ಬೇಕಿದ್ದರೆ ಬೆರೆತು ನಡೆ, ಬೇಡವಾದರೆ ಸರಿದು ನಡೆ ಎಂಬ ಈ ನಡೆ ಅಪೇಕ್ಷಣೀಯವಲ್ಲದೇ ಹೋದರೂ ಆಕ್ಷೇಪಣೀಯ ವಂತೂ ಅಲ್ಲ . ಕಾಲಾಯ ತಸ್ಮೈ ನಮಃ.

ಈ ಎಲ್ಲದರ ಮಧ್ಯದಲ್ಲಿ ನಾವು ಹುಟ್ಟಿನಿಂದ ಸಾವಿನವರೆಗೂ ಇನ್ನೊಂದು ಜೀವವನ್ನು ಪ್ರೀತಿಸುತ್ತೇವೆ, ಆರಾಧಿಸುತ್ತೇವೆ,ಪೂಜಿಸುತ್ತೇವೆ ನಂಬುತ್ತೇವೆ... ನಂಬಿ ನಡೆಯುತ್ತೇವೆ ಅದುವೇ ದೈವ ,ಅದುವೇ ದೇವರು .ಚಿಕ್ಕಂದಿನಲ್ಲಿ ಕೇಳಿದ್ದನ್ನೆಲ್ಲಾ ಕೊಡುವವನು ದೇವರಾದರೆ ,ತಪ್ಪು ಮಾಡದಂತೆ ತಡೆಯಲು ಕಾರಣವಾಗಿರುವವನು ದೇವರಾದರೆ ,ಪರೀಕ್ಷೆಯಲ್ಲಿ ಪಾಸಾಗಲು ಸಹಾಯ ಮಾಡುವವರು ದೇವರಾದರೆ ಮುಂದೆ ವಯಸ್ಸಾದಂತೆ ದೇವರು ಭಾವ – ಭಕ್ತಿ ಯ ಅವ್ಯಕ್ತ ರೂಪವಾಗಿ ಹೊರಹೊಮ್ಮುತ್ತಾನೆ . ವ್ಯಕ್ತಿಯ ಮಾನಸಿಕ, ಭಾವನಾತ್ಮಕ ಪ್ರಪಂಚದ ಇನ್ನೊಂದು ಭಾಗವಾಗಿ ದೈವ ಭಕ್ತಿ ಆತನ ಪ್ರಪಂಚವನ್ನು ಆಳುತ್ತದೆ. ಇದು ಕೂಡ ಪ್ರೀತಿಯ ಇನ್ನೊಂದು ಮುಖವೇ . ಪ್ರಾಕೃತಿಕ ಅವಘಡಗಳಾದ ಭೂಕಂಪ, ಸುನಾಮಿ, ಹಿಮಪಾತ, ಭೂಕುಸಿತಗಳಂತಹ ಸಂದರ್ಭಗಳಲ್ಲಿ ಜಾತಿ,ಮತ, ಕುಲ ಧರ್ಮಗಳ ಹಂಗಿಲ್ಲದೆ ಒಬ್ಬ ಮನುಷ್ಯ ಮತ್ತೊಬ್ಬ ಮನುಷ್ಯನ ಉಳಿವಿಗಾಗಿ ಹೋರಾಡುತ್ತಾನೆ, ಇದ್ದುದನ್ನು ಹಂಚಿ ಕೊಳ್ಳುತ್ತಾನೆ ,ತನಗಿಲ್ಲದಿದ್ದರೂ ತನ್ನವರಿಗಾಗಿ ಆಹಾರ, ಬಟ್ಟೆ, ವಸತಿ ವ್ಯವಸ್ಥೆ ಮಾಡುತ್ತಾನೆ .... ಅದುವೇ ನಿಜವಾದ ಜಗದ ರೀತಿ.'ಬಾಳು, ಬಾಳಗೊಡು' ಎಂಬ ಧ್ಯೇಯದಂತೆ ನಡೆಯುತ್ತಾನೆ ಅದೇ ನಿಜವಾದ ಮಾನವ ಪ್ರೀತಿ. ಹೀಗೆ ಪ್ರೀತಿಗೆ ಹಲವಾರು ಮುಖಗಳು ,ಹಲವಾರು ಆಯಾಮಗಳು.ಆದರೂ ಕೂಡಾ ಮತ್ತೊಮ್ಮೆ ಮಗದೊಮ್ಮೆ ವಿಶ್ವಮಾನವ ಕುವೆಂಪು ಅವರ ಹೇಳಿಕೆಯಂತೆ ವಿಶ್ವಪ್ರೇಮಿಯಾಗಿ, ವಿಶ್ವಭ್ರಾತೃತ್ವವನ್ನು ಸಾರೋಣ,ವಿಶ್ವ ಮಾನವರಾಗೋಣ, ಮನುಜ ಮತವೇ ವಿಶ್ವಪಥ ಎಂಬ ಹಾದಿಯಲ್ಲಿ ಸಾಗುವ ಪಥಿಕರಾಗೋಣ ಎಂಬ ಆಶಯದೊಂದಿಗೆ.

## ಕವಿ ಮನಸು

### ನೀ ಕಿಂಕರನೆಂದು ಮರೆತೆಯಲ್ಲ !

ದಟ್ಟ ಕಾನನದ ಮಧ್ಯೆ ಇರುವ
ವೃಕ್ಷಕ್ಕೆ ಯಾವ ಬೆಟ್ಟದಿಂದ
ನೀರು ಹರಿದು ಬಂದಿತೋ?

ಉಸಿರಾಡಲು ಗಾಳಿಯನ್ನು
ಯಾವ ದಿಕ್ಕಿನಿಂದ ತೇಲಿ ತಂದಿತೋ?

ದಿನ ದಿನ ದಿನಕರನ
ಕಿರಣಗಳ ಕರುಣೆ ಕಂಡಿತೋ.

ಅದೆಷ್ಟು ಪ್ರಾಣಿ ಪಕ್ಷಿಗೆ
ನೆರಳು ನೀಡಿ ದಣಿವಾರಿಸಿತೋ.

ನಾಗರಿಕತೆಯ ನರನ್ನು ಮಾತ್ರ
ಬುದ್ದಿಯನ್ನು ಬದಿಗೆ ಇಟ್ಟು
ವೃಕ್ಷದ ಬುಡಕ್ಕೆ ಕೊಡಲಿ ಇಟ್ಟನೋ.

ಪ್ರಕೃತಿಯಲ್ಲಿ ಎಲ್ಲಾ ಜೀವರಾಶಿ
ಭೇದವಿಲ್ಲದೆ ಬಾಳುವುದಲ್ಲವೋ.

ಮತಿಹೀನ ಮನುಜ ಮಿತಿಯಿಲ್ಲದೆ
ಕರ್ತನೆಂಬತೆ ಆಡುವೆ ಅಲ್ಲ
ನೀ ಕಿಂಕರನೆಂದು ಮರೆತೆಯಲ್ಲ!!

**– ಮಂಜುಶ್ರೀ ಮುರಳೀಧರ್.**
ತೋರಣಗಲ್ಲು, ಬಳ್ಳಾರಿ.

## ತುಂಗಭದ್ರಾ ನೀರಿನ ಮಟ್ಟ



**ಮಂಗಳವಾರ : 19-12-2023**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1590.08 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 1905 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 11.097 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

**ಕಳೆದ ವರ್ಷ ಇದೇ ದಿನ**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1627.24 ಅಡಿ |
| ಒಳ ಹರಿವು | 2807 ಕ್ಯುಸೆಕ್ |
| ಹೊರ ಹರಿವು | 7019 ಕ್ಯುಸೆಕ್ |
| ಸಾಮರ್ಥ್ಯ | 84.058 ಟಿಎಂಸಿ |

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಯುವಕರು ವ್ಯವಸಾಯದಲ್ಲಿ ತೊಡಗಿ

## ತೋಟಗಾರಿಕೆ ಕುಲಪತಿ ಡಾ.ಆರ್.ಸಿ ಜಗದೀಶ ಹೇಳಿಕೆ। ವಿದ್ಯಾರ್ಥಿಗಳು ವ್ಯವಸಾಯದಲ್ಲಿ ತೊಡಗಬೇಕು ಕೃಷಿ ಕೌಶಲ್ಯಗಳನ್ನು ಹಳ್ಳಿಗಳಲ್ಲಿ ಅಳವಡಿಸಬೇಕು

■ **ಹಂಪಿ ಟೈಮ್ಸ್ ರಾಯಚೂರು**

ಕೃಷಿ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳು ವ್ಯವಸಾಯದಲ್ಲಿ ತೊಡಗಬೇಕು ಮತ್ತು ಕೃಷಿ ಕೌಶಲ್ಯಗಳನ್ನು ಹಳ್ಳಿಗಳಲ್ಲಿ ಅಳವಡಿಸುವ ಮೂಲಕ ಕೃಷಿ ವಲಯವನ್ನು ಅಭಿವೃದ್ಧಿಗೊಳಿಸಬೇಕೆಂದು ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ಕುಲಪತಿ ಡಾ.ಆರ್.ಸಿ ಜಗದೀಶ ಅವರು ಹೇಳಿದರು.

ಅವರು ಡಿ.18ರ(ಸೋಮವಾರ) ನಗರದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಪ್ರೇಕ್ಷಾಗೃಹದಲ್ಲಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಹಾಗೂ ಆಸ್ಥಾ ಫೌಂಡೇಷನ್ ವತಿಯಿಂದ ಹಮ್ಮಿಕೊಂಡಿದ್ದ 8ನೇ ಅಂತರಾಷ್ಟ್ರೀಯ ಜಾಗತಿಕ ಸುಸ್ಥಿರ ಕೃಷಿ ಮತ್ತು ಕೃಷಿ ಸಂಬಂಧಿತ ಸಂಶೋಧನಾ ಉಪಕ್ರಮಗಳ ಸಮ್ಮೇಳನವನ್ನು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಮಾತನಾಡಿದರು.

ದೇಶದಲ್ಲಿರುವ 75 ಕೃಷಿ ವಿಶ್ವಿದ್ಯಾಲಯಗಳಿದ್ದು, ಅವುಗಳಲ್ಲಿ ನೀಡಲಾಗುವ ಗುಣಮಟ್ಟದ ಶಿಕ್ಷಣವನ್ನು




ಪಡೆದು ಪ್ರತಿ ವರ್ಷವೂ 10 ಸಾವಿರ ವಿದ್ಯಾರ್ಥಿಗಳು ಕಲಿಯುತ್ತಿದ್ದು, ಎರಡು ಸಾವಿರಕ್ಕೂ ಹೆಚ್ಚಿನ ಸ್ನಾತಕೋತ್ತರ ವಿದ್ಯಾಥಿಗಳು ಪದವಿಯನ್ನು ಪಡೆಯುತ್ತಿದ್ದಾರೆ.

ಕೃಷಿ ಶಿಕ್ಷಣವನ್ನು ಆನ್‌ಲೈನ್ ಮೂಲಕ ಪಡೆಯಲು ಸಾಧ್ಯವಿಲ್ಲ, ಕಡ್ಡಾಯವಾಗಿ ಕೃಷಿಯನ್ನು ಪ್ರಯೋಗ ಮಾಡಲೇ ಬೇಕಾಗುತ್ತದೆ ಆದ್ದರಿಂದ ಇದು ಪ್ರಯೋಗಾಧಾರಿತ ಶಿಕ್ಷಣವಾಗಿದೆ. ಜೊತೆಗೆ ಈ ಶಿಕ್ಷಣದಲ್ಲ ಕೌಶಲ್ಯವು ಇರುತ್ತದೆ ಎಂದು ತಿಳಿಸಿದರು.

ಕೃಷಿ ಪದವಿಗಾಗಿ ಶೇ.50 ರಷ್ಟು ವಿದ್ಯಾರ್ಥಿಗಳು ಕೃಷಿ ಮೀಸಲಾತಿಯಿಂದ ಪ್ರವೇಶ ಪಡೆದಿರುತ್ತಾರೆ ಆದರೆ ಪದವಿ ನಂತರ ಶೇ.5ಕ್ಕಿಂತಲೂ ಕಡಿಮೆ ಜನರು ವ್ಯವಸಾಯಕ್ಕೆ ಮರಳುತ್ತಾರೆ. ಇದರಿಂದ ಕೃಷಿ ವಲವು ಕ್ಷೀಣಿಸುತ್ತಾ ಹೋಗುತ್ತದೆ ಆದ್ದರಿಂದ ಕೃಷಿಯನ್ನು ಮಾಡುವ ಮೂಲಕ ಕೃಷಿಯಲ್ಲಿ ಹೊಸ ಹೊಸ ತಂತ್ರಜ್ಞಾನವನ್ನು ಬಳಸಿ ಕೃಷಿ ಅಭಿವೃದ್ಧಿಗೆ ಮುಂದಾಗಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ ಹನುಮಂತಪ್ಪ, ಕೊಪ್ಪಳ ಅರಣ್ಯ ಉಪ ಸಂರಕ್ಷಣಾಧಿಕಾರಿ ಡಾ.ಎ ಚಂದ್ರಣ್ಣ, ನೇಪಾಳದ ಚಿಟ್ವನ್ ಕೃಷಿ ಇಲಾಖೆಯ ಡಾ.ದಿಲಿಪ್ ಕುಮಾರ ಝಾ, ಬಾಂಗ್ಲಾದೇಶ ಸರ್ಕಾರದ ಅಂತರಾಷ್ಟ್ರೀಯ ಸಲಹೆಗಾರರು ಹಾಗೂ ನಿರ್ದೇಶಕರಾದ ಡಾ.ಬಿ.ಕೆ ಚಕ್ರಬೋರ್ತಿ, ಆಸ್ಥಾ ಫೌಂಡೇಷನ್‌ನ ಅಧ್ಯಕ್ಷ ಡಾ.ಎಸ್.ಪಿ ಸಿಂಗ್, ಸಮ್ಮೇಳನ ಆಯೋಜಕರಾದ ಡಾ.ಮಹೇಂದ್ರ ಡಾ.ಸಿಂಗ್, ಬಿ.ವಿ ತೆಂಬುರ್ನೆ, ಕೃಷಿ ವಿವಿಯ ಸ್ನಾಥಕೋತ್ತರ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಗುರುರಾಜ ಸುಂಕದ, ಕೃಷಿ ವಿವಿಯ ರಿಜಿಸ್ಟ್ರಾರ್ ಡಾ.ಎಂ ವೀರನಗೌಡ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



# ಮಕ್ಕಳ ಹಕ್ಕುಗಳ ಒಡಂಬಡಿಕೆ ಜಾರಿ



■ **ಹಂಪಿ ಟೈಮ್ಸ್ ಕೊಪ್ಪಳ**

ದೇಶದ ಸಮಸ್ತ ಮಕ್ಕಳಿಗೆ ಅವರ ಹಕ್ಕುಗಳನ್ನು ಅನುಭವಿಸುವಂತಹ ಸುರಕ್ಷಿತ ವಾತಾವರಣ ನಿರ್ಮಿಸುವ ಉದ್ದೇಶದಿಂದ ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ ಕಾನೂನುಗಳನ್ನು ಜಾರಿಗೆ ತಂದಿದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಲೀಗಲ್ ಕಂ ಪ್ರೊಬೇಷನರ್ ಶಿವಲೀಲಾ ವನ್ನೂರು ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೊಪ್ಪಳ ಇವರುಗಳ ಸಂಯುಕ್ತಾಶ್ರಯದಲ್ಲಿ ಸೋಮವಾರದಂದು ಕುಕನೂರಿನ ಕೆ.ಎಲ್.ಇ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಮಕ್ಕಳ ಹಕ್ಕುಗಳ ಕುರಿತು ಜಾಗೃತಿ ಕಾರ್ಯಕ್ರಮವನ್ನು ಉದ್ದೇಶಿಸಿ ಅವರು ಮಾತನಾಡಿದರು.

ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಗೆ ಭಾರತ ಸರಕಾರವು 11 ಡಿಸೆಂಬರ್ 1992ರಲ್ಲಿ ಸಹಿಮಾಡಿದ್ದು, ಅದರನ್ವಯ ದೇಶದ ಸಮಸ್ತ ಮಕ್ಕಳಿಗೆ ಅವರ ಹಕ್ಕುಗಳನ್ನು ಅನುಭವಿಸುವಂತಹ ಸುರಕ್ಷಿತ ವಾತಾವರಣವನ್ನು ನಿರ್ಮಿಸಲು ಹಲವಾರು ಕಾನೂನುಗಳನ್ನು ಜಾರಿಯಲ್ಲಿ ತಂದಿರುತ್ತದೆ. ಅವುಗಳಲ್ಲಿ ಅತೀ ಮುಖ್ಯವಾದವುಗಳು ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯ್ದೆ–2012 ಹಾಗೂ ತಿದ್ದುಪಡಿ ಕಾಯ್ದೆ–2019, ಬಾಲ್ಯ ವಿವಾಹ ನಿಷೇಧ ಕಾಯ್ದೆ–2006 ಮತ್ತು ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ–2015 ಪ್ರಮುಖವಾದವುಗಳಾಗಿವೆ. ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯ್ದೆ–2012 ಮತ್ತು ತಿದ್ದುಪಡಿ ಕಾಯ್ದೆ–2019ರನ್ವಯ 18 ವರ್ಷದೊಳಗಿನ ಯಾವುದೇ ಮಗುವಿಗೆ ಲೈಂಗಿಕ ಉದ್ದೇಶದಿಂದ ಶಾಬ್ದಿಕ, ಸಂಜ್ಞೆ, ಆಂಗಿಕವಾಗಿಯೇ ಆಗಲಿ, ಲಿಖಿತವಾಗಿ ಆಗಲಿ ವಿಕೃತಿಯಾಗಿ ವರ್ತಿಸಿದಲ್ಲಿ ಅದನ್ನು ಲೈಂಗಿಕ ಕಿರುಕುಳ ಎಂದು ಪರಿಭಾಷಿಸಿದೆ. ಈ ರೀತಿಯ ಕೃತ್ಯಕ್ಕೆ ಕನಿಷ್ಠ 03 ವರ್ಷದಿಂದ 05 ವರ್ಷಗಳ ಜೈಲು ಶಿಕ್ಷೆಯನ್ನು ವಿಧಿಸಬಹುದಾಗಿದೆ. ಪ್ರೀತಿ ಪ್ರೇಮದ ಹೆಸರಿನಲ್ಲಿ 18 ವರ್ಷದೊಳಗಿನ ಯಾವುದೇ ಮಕ್ಕಳೊಂದಿಗೆ ದೈಹಿಕ ಸಂಪರ್ಕ ಹೊಂದಿದಲ್ಲಿ, ಅಂತಹ ವ್ಯಕ್ತಿಗಳಿಗೆ ಕನಿಷ್ಠ 20 ವರ್ಷದಿಂದ ಆಜೀವ ಜೈಲು ಶಿಕ್ಷೆ ಮತ್ತು ದಂಡವನ್ನು ವಿಧಿಸಬಹುದಾಗಿದೆ. ಒಂದು ವೇಳೆ ಮಕ್ಕಳ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವವರು, ಸರಕಾರಿ ನೌಕರರು ಈ ರೀತಿಯ ಕೃತ್ಯದಲ್ಲಿ ಭಾಗಿಯಾದಲ್ಲಿ ಅಂತಹ ವ್ಯಕ್ತಿಗಳಿಗೆ ಕನಿಷ್ಠ 20 ವರ್ಷದಿಂದ ಆಜೀವ ಜೈಲು ಶಿಕ್ಷೆ ಅಥವಾ ಮರಣದಂಡನೆ ಮತ್ತು ದಂಡವನ್ನು ವಿಧಿಸಬಹುದಾಗಿದೆ. ಮಕ್ಕಳ ಅಶ್ಲೀಲ ಚಿತ್ರವನ್ನು ಸಂಗ್ರಹಿಸಿಟ್ಟುಕೊಂಡಲ್ಲಿ, ಅಥವಾ ಬೇರೊಬ್ಬರೊಂದಿಗೆ ಹಂಚಿಕೊಂಡಲ್ಲಿ ಅಂತಹ ವ್ಯಕ್ತಿಗಳಿಗೆ ಕನಿಷ್ಠ 03 ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು ದಂಡವನ್ನು ವಿಧಿಸಬಹುದಾಗಿದೆ ಎಂದು ತಿಳಿಸಿದರು. ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಆಪ್ತ ಸಮಾಲೋಚಕರಾದ ರವಿ ಬಡಿಗೇರ ಮಾತನಾಡಿ, ರಾಜ್ಯವನ್ನು ಬಾಲ್ಯವಿವಾಹ ಮುಕ್ತ ರಾಜ್ಯವನ್ನಾಗಿಸುವ ಹಿನ್ನಲೆಯಲ್ಲಿ ಬಾಲ್ಯವಿವಾಹ ನಿಷೇಧ ಕಾಯ್ದೆ–2006ಕ್ಕೆ ಕರ್ನಾಟಕ ರಾಜ್ಯ ಸರಕಾರವು ತಿದ್ದುಪಡಿಯನ್ನು–2016ರಲ್ಲಿ ತಂದಿದ್ದು, ಅಪ್ರಾಪ್ತ ವಯಸ್ಸಿನ ಬಾಲಕಿಯನ್ನು ಮದುವೆಯಾದ ವಯಸ್ಕ ಪುರುಷನಿಗೆ, ಮದುವೆಯನ್ನು ಮಾಡಿದ ಪಾಲಕ, ಪೋಷಕರಿಗೆ ಮತ್ತು ಬಾಲ್ಯವಿವಾಹದಲ್ಲಿ ಭಾಗವಹಿಸಿದವರಿಗೆ, ಪ್ರೋತ್ಸಾಹಿಸಿದವರಿಗೆ ಕನಿಷ್ಠ 01 ವರ್ಷದಿಂದ 02 ವರ್ಷಗಳ ಜೈಲು ಶಿಕ್ಷೆ ಮತ್ತು ರೂ. 1 ಲಕ್ಷ ದಂಡವನ್ನು ವಿಧಿಸಬಹುದಾಗಿದೆ. ರಾಜ್ಯದಲ್ಲಿ 03 ಮಾರ್ಚ್ 2018ರ ನಂತರದ ಎಲ್ಲಾ ಬಾಲ್ಯವಿವಾಹಗಳು ಅಸಿಂಧು ವಿವಾಹಗಳಾಗಿವೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ ಅಪ್ರಾಪ್ತ ವಯಸ್ಸಿನ ಪತ್ನಿಯೊಂದಿಗೆ ಲೈಂಗಿಕ ಸಂಪರ್ಕವು ಶಿಕ್ಷಾರ್ಹ ಅಪರಾಧವಾಗಿದೆ. ಆದ್ದರಿಂದ ಮಕ್ಕಳಿಗೆ ಯಾವುದೇ ರೀತಿಯಲ್ಲಿ ಲೈಂಗಿಕ ಕಿರುಕುಳವನ್ನು ನೀಡತಕ್ಕದ್ದಲ್ಲ ಹಾಗೂ ಬಾಲ್ಯವಿವಾಹವನ್ನು ಮಾಡಿ ಶಿಕ್ಷೆಗೆ ಗುರಿಯಾಗಬೇಡಿ ಎಂದು ತಿಳಿಸುತ್ತಾ ಈ ಮಾಹಿತಿಯನ್ನು ನಿಮ್ಮಿಂದ ಸಾಧ್ಯವಾದಷ್ಟು ಇತರರಿಗೆ ತಿಳಿಸಿ, ಮಕ್ಕಳಿಗೆ ಸುರಕ್ಷಿತ ವಾತಾವರಣ ನಿರ್ಮಿಸಲು ಜಿಲ್ಲಾಡಳಿತದೊಂದಿಗೆ ನೀವು ಸಹ ಕೈಜೋಡಿಸಿ ಎಂದು ವಿನಂತಿಸಿದರು.

ಮಕ್ಕಳ ಸಹಾಯವಾಣಿ–1098ನ ಸಿಬ್ಬಂದಿ ರಾಘವೇಂದ್ರ ಕುಲಕರ್ಣಿ ಮಾತನಾಡಿ, ಮಿಷನ್ ವಾತ್ಸಲ್ಯ ಯೋಜನೆಯಡಿಯಲ್ಲಿ ಮಕ್ಕಳ ಸಹಾಯವಾಣಿಯನ್ನು ತುರ್ತು ಪ್ರತಿಕ್ರಿಯೆ ಸೇವೆಗಳ ವ್ಯವಸ್ಥೆಯಡಿಯಲ್ಲಿ ಗುರುತಿಸಿದ್ದು, ಇದು ದಿನದ 24 ಗಂಟೆ ಮತ್ತು ವಾರದ 07 ದಿನಗಳು ಕಾರ್ಯನಿರ್ವಹಿಸುತ್ತದೆ.

ಕಾರ್ಯಕ್ರಮದಲ್ಲಿ ಕೆ.ಎಲ್.ಇ ಪದವಿಪೂರ್ವ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಅರುಣಕುಮಾರ ಹಿರೇಮಠ, ಉಪನ್ಯಾಸಕರಾದ ಶರಣಪ್ಪ ಉಮಚಗಿ, ಪ್ರಕಾಶ ಗಡ್ಡದ, ಕಾಲೇಜು ವಿದ್ಯಾರ್ಥಿಗಳು, ಮಕ್ಕಳ ಸಹಾಯವಾಣಿಯ ಬಸವರಾಜ ಗುಳೇದ ಅವರು ಉಪಸ್ಥಿತರಿದ್ದರು.

# ಪಿಯು ಕಾಲೇಜಿನಲ್ಲಿ ಅಂಬೇಡ್ಕರ್ ಓದು

■ **ಹಂಪಿ ಟೈಮ್ಸ್ ಕೊಪ್ಪಳ**

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕೊಪ್ಪಳ ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜು ಕಿನ್ನಾಳ ಇವರ ಸಹಯೋಗದಲ್ಲಿ ಡಿ.16 ರಂದು 2023–24ನೇ ಸಾಲಿನ ಅಂಬೇಡ್ಕರ್ ಓದು ಕಾರ್ಯಕ್ರಮವನ್ನು ಕಿನ್ನಾಳ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಕಿನ್ನಾಳ ಸರಕಾರಿ ಪದವಿ ಪೂರ್ವ ಕಾಲೇಜಿನ ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷರಾದ ಪಂಪಾಪತಿ ಹಿರೇಮಠ ಹಾಗೂ ವೇದಿಕೆ ಮೇಲಿನ ಇತರೆ ಗಣ್ಯರು ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಚಾರ್ಯರಾದ ವಾಸುದೇವ ಅಡವಿಭಾವಿ ರವರು ವಹಿಸಿದ್ದರು. ಗಂಗಾವತಿಯ ಎಸ್.ಎಮ್.ಎನ್.ಎಮ್ ಬಾಲಕಿಯರ ಸರಕಾರಿ ಪದವಿ ಪೂರ್ವ ಕಾಲೇಜು ಉಪನ್ಯಾಸಕರಾದ ಡಾ.ಸೋಮಕ್ಕ ಎಮ್. ಅವರು ತಮ್ಮ ಉಪನ್ಯಾಸದಲ್ಲಿ ಅಂಬೇಡ್ಕರ್ ರವರ ಬದುಕು ಮತ್ತು ಸಾಧನೆಯ ಕುರಿತು ವಿವರವಾಗಿ ವಿಧ್ಯಾರ್ಥಿಗಳಿಗೆ ತಿಳಿಸಿದರು. ಅಂಬೇಡ್ಕರ್ ರವರ ಕುರಿತು ಪ್ರಬಂಧ ಸ್ಪರ್ದೆಯಲ್ಲಿ ವಿಜೇತರಾದ ಐವರು ವಿಧ್ಯಾರ್ಥಿಗಳಿಗೆ ಪುಸ್ತಕ ಬಹುಮಾನವನ್ನು ವಿತರಿಸಲಾಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕಿನ್ನಾಳ ಸರಕಾರಿ ಪದವಿ ಪೂರ್ವ ಕಾಲೇಜಿನ ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರಾದ ಸಿದ್ದಲಿಂಗಪ್ಪ ಲಕ್ಕುಂಡಿ, ಪಂಪಣ್ಣ ಟಂಕಸಾಲಿ, ಸುವರ್ಣ ಮಂಜುನಾಥ ಜನಾದ್ರಿ, ಜಗದೀಶ ಬಳಿಗಾರ, ರಾಘವೇಂದ್ರ ಆರ್ ವಾಲ್ಮೀಕಿ, ಖಜಾಂಚಿ ಅಶೋಕ ಚಿತ್ರಗಾರ, ಮಂಜುನಾಥ ಜನಾದ್ರಿ, ಪ್ರೌಢಶಾಲೆ ವಿಭಾಗದ ಉಪಪ್ರಾಚಾರ್ಯರಾದ ಶಂಕರಗೌಡ, ವೆಂಕಟೇಶ ಹೊಸಮನಿ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



**PLACE YOUR ADVERTISEMENT HERE, CONTCAT FOR MORE DETAILS: 9448633038**

**IN THE COURT OF THE CIVIL JUDGE AND J.M.F.C.AT KUDLIGI Crl. Misc. No.850/2023**

Between:
1) Smt.Kotramma wife of late Kotrappa aged about 47 years, Hindu agriculturist resident of allanayakanahalli Village in Kottur Taluk, Vijayanagara District. ....... Petitioner

And

The Tahasildar Kottur ..........Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioner has instituted above petition to get the death certificate of his deceased Petitioner Father-in-law by Name Hulugappa S/o late Lakshmappa was died on 19/07/1983 at Mallanayakanahalli Village in Kottur Taluk, Vijayanagara District. On the file of the civil Judge& JMFC at Kudligi. The Tahasildar Kottur is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 29/12/2023 at 11 A.M. and interested persons are directed to produce all the documents upon which you intended to rely in support of your defense. Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 17/10/2023

By Order of the court
Chief Ministerial officer
Civil Judge and J.M.F.C Kudligi

Swaroopanada Naik.L
Advocate, Kudligi

**IN THE COURT OF THE CIVIL JUDGE AND J.M.F.C.AT KUDLIGI Crl. Misc. No.849/2023**

Between:
1) Smt.Kotramma wife of late Kotrappa aged about 47 years, Hindu agriculturist resident of Mallanayakanahalli Village in Kottur Taluk, Vijayanagara District........ Petitioner

And

The Tahasildar Kottur .........Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioner has instituted above petition to get the death certificate of his deceased Petitioner Father-in-law by Name Lakshmappa S/o late Hulugappa was died on 17/08/1990 at Mallanayakanahalli Village in Kottur Taluk, Vijayanagara District. On the file of the civil Judge& JMFC at Kudligi. The Tahasildar Kottur is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 29/12/2023 at 11 A.M. and interested persons are directed to produce all the documents upon which you intended to rely in support of your defense. Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 17/10/2023

By Order of the court
Chief Ministerial officer
Civil Judge and J.M.F.C Kudligi

Swaroopanada Naik.L
Advocate, Kudligi

**IN THE COURT OF THE CIVIL JUDGE AND J.M.F.C.AT KUDLIGI Crl. Misc. No.852/2023**

Between:
1) Smt.Kotramma wife of late Kotrappa aged about 47 years, Hindu agriculturist resident of Mallanayakanahalli Village in Kottur Taluk, Vijayanagara District....... Petitioner

And

The Tahasildar Kottur .......Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioner has instituted above petition to get the death certificate of his deceased Petitioner aunty by Name Akashamma w/o late Nagappa was died on 11/08/2010 at Mallanayakanahalli Village in Kottur Taluk, Vijayanagara District. On the file of the civil Judge& JMFC at Kudligi. The Tahasildar Kottur is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 29/12/2023 at 11 A.M. and interested persons are directed to produce all the documents upon which you intended to rely in support of your defense. Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 17/10/2023

By Order of the court
Chief Ministerial officer
Civil Judge and J.M.F.C Kudligi

Swaroopanada Naik.L
Advocate, Kudligi

**IN THE COURT OF THE CIVIL JUDGE AND J.M.F.C.AT KUDLIGI Crl. Misc. No.851/2023**

Between:
1) Smt.Kotramma wife of late Kotrappa aged about 47 years, Hindu agriculturist resident of Mallanayakanahalli Village in Kottur Taluk, Vijayanagara District........ Petitioner

And

The Tahasildar Kottur ........Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioner has instituted above petition to get the death certificate of his deceased Petitioner Mother by Name Huligemma w/o late Chinnappa was died on 19/09/2012 at Mallanayakanahalli Village in Kottur Taluk, Vijayanagara District. On the file of the civil Judge& JMFC at Kudligi. The Tahasildar Kottur is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 29/12/2023 at 11 A.M. and interested persons are directed to produce all the documents upon which you intended to rely in support of your defense. Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 17/10/2023

By Order of the court
Chief Ministerial officer
Civil Judge and J.M.F.C Kudligi

Swaroopanada Naik.L
Advocate, Kudligi

**IN THE COURT OF THE CIVIL JUDGE AND J.M.F.C.AT KUDLIGI Crl. Misc. No.761/2023**

Between:
1) Smt.Kotramma wife of late Kotrappa aged about 47 years, Hindu agriculturist resident of Mallanayakanahalli Village in Kottur Taluk, Vijayanagara District......... Petitioner

And

The Tahasildar Kottur .......Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioner has instituted above petition to get the death certificate of his deceased Petitioner Husband by Name Gudalli Kotrappa S/o late Hulugappa was died on 02/01/1997 at Mallanayakanahalli Village in Kottur Taluk, Vijayanagara District. On the file of the civil Judge& JMFC at Kudligi. The Tahasildar Kottur is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 29/12/2023 at 11 A.M. and interested persons are directed to produce all the documents upon which you intended to rely in support of your defense. Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 20/10/2023

By Order of the court
Chief Ministerial officer
Civil Judge and J.M.F.C Kudligi

Swaroopanada Naik.L
Advocate, Kudligi

**IN THE COURT OF THE CIVIL JUDGE AND J.M.F.C.AT KUDLIGI Crl. Misc. No.760/2023**

Between:
1) Smt.Kotramma wife of late Kotrappa aged about 47 years, Hindu agriculturist resident of Mallanayakanahalli Village in Kottur Taluk, Vijayanagara District........ Petitioner

And

The Tahasildar Kottur .......Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioner has instituted above petition to get the death certificate of his deceased Petitioner brother-in-law by Name Nagappa S/o late Hulugappa was died on 16/06/1997s at Mallanayakanahalli Village in Kottur Taluk, Vijayanagara District. On the file of the civil Judge& JMFC at Kudligi. The Tahasildar Kottur is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 29/12/2023 at 11 A.M. and interested persons are directed to produce all the documents upon which you intended to rely in support of your defense. Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 20/10/2023

By Order of the court
Chief Ministerial officer
Civil Judge and J.M.F.CKudligi

Swaroopanada Naik.L
Advocate, Kudligi

ಮೈಕ್ರೋ ನ್ಯೂಸ್

## ವಸತಿ ಸೌಲಭ್ಯಕ್ಕೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ತಾಲ್ಲೂಕಿನ ಮರಿಯಮ್ಮನಹಳ್ಳಿ ಪಟ್ಟಣ ಪಂಚಾಯತ್ ವತಿಯಿಂದ ವಸತಿ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಮರಿಯಮ್ಮನಹಳ್ಳಿ ಪಟ್ಟಣದ ವ್ಯಾಪ್ತಿಯಲ್ಲಿ ವಾಸಿಸುವಂತಹ ನಿವೇಶನ ರಹಿತ ಹಾಗೂ ವಸತಿರಹಿತ ನಾಗರೀಕರಿಗೆ ವಿವಿಧ ವಸತಿಯೋಜನೆಯಡಿ ಸೌಲಭ್ಯ ಕಲ್ಪಿಸುವುದಕ್ಕಾಗಿ ಅರ್ಹ ಫಲಾನುಭವಿಗಳ ಪಟ್ಟಿತಯಾರಿಸಲಾಗುತ್ತಿದೆ. ಅರ್ಹರು ಆಧಾರ್‌ಕಾರ್ಡ್, ಚುನಾವಣೆ ಗುರುತಿನಚೀಟಿ, ರೇಷನ್‌ಕಾರ್ಡ್, ಜಾತಿ&ಆದಾಯ ಪ್ರಮಾಣ ಪತ್ರ, ಅರ್ಜಿದಾರರ ಹೆಸರಿನಲ್ಲಿ ಅಥವಾ ಕುಟುಂಬದ ಸದಸ್ಯರ ಹೆಸರಿನಲ್ಲಿ ನಿವೇಶನ, ವಸತಿ ಹೊಂದಿರುವುದಿಲ್ಲ ಎಂಬುದರ ಬಗ್ಗೆ ಪ್ರಮಾಣ ಪತ್ರದೊಂದಿಗೆ ಡಿ.30ರ ಒಳಗಾಗಿ ಅರ್ಜಿ ಸಲ್ಲಿಸಬೇಕು. ನಿಗದಿತ ದಿನಾಂಕದೊಳಗೆ ಬಂದಂತಹ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು ಎಂದು ಮರಿಯಮ್ಮನಹಳ್ಳಿ ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿ ತಿಳಿಸಿದ್ದಾರೆ


## ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಪ್ರವಾಸ

**ಹಂಪಿ ಟೈಮ್ಸ್ ಕೊಪ್ಪಳ**

ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ತಂಗಡಗಿ ಅವರು ಡಿಸೆಂಬರ್ 20ರಂದು ಕೊಪ್ಪಳ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ.

ಅಂದು ಬೆಳಗ್ಗೆ 10 ಗಂಟೆಗೆ ಕಾರಟಗಿಯಿಂದ ನಿರ್ಗಮಿಸಿ ಬೆಳಗ್ಗೆ 11 ಗಂಟೆಗೆ ಬಸರಿಹಾಳ ಗ್ರಾಮಕ್ಕೆ ತೆರಳಿ ಕನಕಗಿರಿ ವಿಧಾನಸಭಾ ಕ್ಷೇತ್ರದ ಬಸರಿಹಾಳ ಮತ್ತು ಗೌರಿಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ 'ಅಭಯ ಹಸ್ತ ಎಂಬ ಹೆಸರಿನೊಂದಿಗೆ ನುಡಿದಿದ್ದೇವೆ, ನುಡಿಯುತ್ತೇವೆ– ನಿಮ್ಮ ಬಳಿಗೆ ನಾವು' ಎಂಬ ಕಾರ್ಯಕ್ರಮದಲ್ಲಿ ಸಾರ್ವಜಿಕರ ಭೇಟಿ ಮತ್ತು ಕುಂದುಕೊರತೆಗಳ ವಿಚಾರಣೆ ನಡೆಸುವರು. ಸಂಜೆ 6 ಗಂಟೆಗೆ ಗೌರಿಪುರದಿಂದ ನಿರ್ಗಮಿಸಿ 7 ಗಂಟೆಗೆ ಕಾರಟಗಿಗೆ ಆಗಮಿಸಿ ಸಾರ್ವಜನಿಕ ಭೇಟಿ ಮತ್ತು ಕುಂದುಕೊರತೆಗಳ ವಿಚಾರಣೆ ನಡೆಸುವರು ಎಂದು ಸಚಿವರ ಆಪ್ತ ಕಾರ್ಯದರ್ಶಿಗಳು ತಿಳಿಸಿದ್ದಾರೆ.

## ನಾಡದೇವತೆ ಹುಲಿಗೆಮ್ಮ ದೇವಿ ದರ್ಶನ ಪಡೆದ ಸಾರಿಗೆ, ಮುಜರಾಯಿ ಸಚಿವರು



**ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಜಿಲ್ಲೆಯ ಪ್ರವಾಸದಲ್ಲಿದ್ದ ಸಾರಿಗೆ ಮತ್ತು ಮುಜರಾಯಿ ಸಚಿವರಾದ ರಾಮಲಿಂಗಾರೆಡ್ಡಿ ಅವರು ಡಿಸೆಂಬರ್ 19 ರಂದು ಕೊಪ್ಪಳ ತಾಲ್ಲೂಕಿನ ಹುಲಿಗಿಯ ಶ್ರೀ ಹುಲಿಗೆಮ್ಮ ದೇವಸ್ಥಾನಕ್ಕೆ ಭೇಟಿ ನೀಡಿ ದೇವಿಯ ಆಶೀರ್ವಾದ ಪಡೆದರು.


ಗಂಗಾವತಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಜನಾರ್ಧನ ರೆಡ್ಡಿ ಅವರು ಸಹ ಇದೆ ವೇಳೆ ಸಚಿವರೊಂದಿಗೆ ದೇವಸ್ಥಾನಕ್ಕೆ ಭೇಟಿ ನೀಡಿ ಆಶೀರ್ವಾದ ಪಡೆದರು.

ಪುರೋಹಿತರಾದ ಗೋಪಾಲಕೃಷ್ಣ ಜೋಶಿ, ಶ್ರೀನಿವಾಸ ಶರ್ಮಾ ಮತ್ತು ನಾಗರಾಜ ಭಟ್ ಅವರು ವಿಶೇಷ ಪೂಜೆ ನೆರವೇರಿಸಿ ಸಚಿವರಿಗೆ ಹಾಗೂ ಶಾಸಕರಿಗೆ ಹೂವು, ಪ್ರಸಾದ ನೀಡಿದರು.

ಈ ಸಂದರ್ಭದಲ್ಲಿ ಮುಜರಾಯಿ ಇಲಾಖೆಯ ಆಯುಕ್ತರಾದ ಬಸವರಾಜೇಂದ್ರ ಹೆಚ್., ಅಪರ ಜಿಲ್ಲಾಧಿಕಾರಿ ಸಾವಿತ್ರಿ ಕಡಿ, ಮುಖಂಡರಾದ ಬಸವರಾಜ ಹಿಟ್ನಾಳ, ತಹಸೀಲ್ದಾರ ವಿಠ್ಠಲ್ ಚೌಗಲಾ, ದೇವಾಲಯದ ಆಡಳಿತಾಧಿಕಾರಿ ಅರವಿಂದ ಸುತಗುಂಡಿ, ತಾಪಂ ಇಓ ದುಂಡಪ್ಪ ತುರಾದಿ, ಪೊಲೀಸ್ ಅಧಿಕಾರಿಗಳಾದ ಸಿದ್ದಲಿಂಗಪ್ಪಗೌಡ ಪಾಟೀಲ, ಮಹಾಂತೇಶ ಸಜ್ಜನ, ಹುಲಗಿ ಗ್ರಾಮ ಪಂಚಾಯತ್ ಅಧ್ಯಕ್ಷೆ ನೀಲಮ್ಮ ಗುಂಗಾಡಿ, ಉಪಾಧ್ಯಕ್ಷರಾದ ಸಯ್ಯದ ನ್ಯಾಮತಲಿ, ಸದಸ್ಯರಾದ ಕಿಶೋರ, ಖಾಜಾವಲಿ ಜವಳಿ, ರತ್ನಕಲಾ ಕೇಶವರಾವ್, ಪಿಡಿಓ ಗುರುದೇವಮ್ಮ ಸೇರಿದಂತೆ ಇತರರು ಇದ್ದರು.

# ಗರ್ಭಿಣಿಯರ ತಪಾಸಣೆ ಹೆಚ್ಚಿಸಿ

## ಜಿಪಂ ಸಿಇಓ ರಾಹುಲ್ ಶರಣಪ್ಪ ಸಂಕನೂರ ಸೂಚನೆ



**ಹಂಪಿ ಟೈಮ್ಸ್ ಬಳ್ಳಾರಿ**

ಗರ್ಭಿಣಿ, ಚಿಕ್ಕ ಮಕ್ಕಳ ತಪಾಸಣೆಗಾಗಿ ತಜ್ಞ ವೈದ್ಯರ ಮೂಲಕ ನೀಡುವ ಸೇವೆಯನ್ನು ಅವರ ವಸತಿ ಪ್ರದೇಶದಲ್ಲಿಯೇ ಒದಗಿಸಲು ಸರ್ಕಾರದ ವಿನೂತನ ಯೋಜನೆಯಾದ ಆಯುಷ್ಮತಿ ಕ್ಲಿನಿಕ್‌ಗಳ ಕುರಿತು ಸಾರ್ವಜನಿಕರಲ್ಲಿ ಹೆಚ್ಚಿನ ಜಾಗೃತಿ ಮೂಡಿಸಲು ಅಗತ್ಯ ಮುತವರ್ಜಿ ವಹಿಸಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ವೈದ್ಯಾಧಿಕಾರಿಗಳಿಗೆ ಕರೆ ನೀಡಿದರು.

ನಗರದ ಜಿಲ್ಲಾ ಪಂಚಾಯತ್‌ನ ನಜೀರ್ ಸಭಾಂಗಣದಲ್ಲಿ ಮಂಗಳವಾರ ಜರುಗಿದ ಜಿಲ್ಲಾ ಆರೋಗ್ಯ ಸಂಘದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಗರದ ಪ್ರದೇಶಗಳಾದ ಮಿಲ್ಲರ್‌ಪೇಟ್ ಹಾಗೂ ಬ್ರೂಸ್‌ಪೇಟ್ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಈಗಾಗಲೇ ಒಡಂಬಡಿಕೆಯಂತೆ ತಜ್ಞವೈದ್ಯರು ಪ್ರತಿದಿನ ಎರಡು ಗಂಟೆಗಳ ಕಾಲ ಸೇವೆಯನ್ನು ಒದಗಿಸುತ್ತಿದ್ದಾರೆ. ಈ ಸೇವೆಯನ್ನು ಸಾಧ್ಯವಿರುವ ಎಲ್ಲಾ ಪ್ರಸೂತಿ ತಜ್ಞರು, ಮಕ್ಕಳ ತಜ್ಞರು, ಚರ್ಮರೋಗ ತಜ್ಞರು, ಎಲುಬು ಕೀಲು ತಜ್ಞರು, ಕಣ್ಣಿನ ತಜ್ಞರು, ಕಿವಿ ಮೂಗು ಗಂಟಲು ತಜ್ಞರು ಹಾಗೂ ಶಸ್ತ್ರಚಿಕಿತ್ಸಾ ತಜ್ಞರು ಕನ್ಸಲ್ಟೇಶನ್ ಆಧಾರದಡಿ ನಿಯಮಾನುಸಾರ ನೇಮಕ ಮಾಡಿಕೊಂಡು ಹೆಚ್ಚಿನ ಸೇವೆ ನೀಡಬೇಕು ಎಂದು ತಿಳಿಸಿದರು.

ನಗರ ಮತ್ತು ಗ್ರಾಮೀಣ ಭಾಗದಲ್ಲಿ 30 ವರ್ಷ ಮೇಲ್ಪಟ್ಟವರಿಗೆ ಮಧುಮೇಹ ಮತ್ತು ರಕ್ತದೊತ್ತಡ ಪರೀಕ್ಷೆ ತಪಾಸಣೆ ನಡೆಸಲು ಸೂಕ್ತ ಕಾರ್ಯಯೋಜನೆ ಮಾಡಿಕೊಳ್ಳಬೇಕು. ಗ್ರಾಮ ಪಂಚಾಯತಿ ಮಟ್ಟದಲ್ಲಿ ಕ್ಷಯರೋಗ ನಿರ್ಮೂಲನೆಗೆ ಮತ್ತು ಕ್ಷಯಮುಕ್ತ ಗ್ರಾಮ ಪಂಚಾಯತಿ ಘೋಷಣೆಗಾಗಿ ಎಲ್ಲಾ ಇಲಾಖೆಗಳ ಸಹಕಾರ ಪಡೆಯಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಅನೀಮಿಯಮುಕ್ತಪೌಷ್ಟಿಕಕರ್ನಾಟಕದಡಿಯಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ರಕ್ತಹೀನತೆ ತಪಾಸಣಾ ಶಿಬಿರಗಳನ್ನು ಪರಿಣಾಮಕಾರಿಗೊಳಿಸಬೇಕು. ಕಡಿಮೆ ಹೆಚ್‌ಬಿ ಹೊಂದಿರುವ ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ಚಿಕಿತ್ಸೆಯನ್ನು ಆಯಾ ಹಂತಗಳಲ್ಲಿ ನೀಡಬೇಕು. ಅಗತ್ಯವಿದ್ದಲ್ಲಿ ರಕ್ತ ಪೂರಣ ಮತ್ತು ಐರನ್ ಸುಕ್ರೋಸ್ ಚುಚ್ಚುಮದ್ದು ನೀಡಬೇಕು ಎಂದು ಸಲಹೆ ನೀಡಿದರು.

ಇದೇ ಡಿ.27ರಿಂದ ಮುಂದಿನ ಜ.11 ರವರೆಗೆ ನಡೆಯುವ ಕುಷ್ಟರೋಗ ಪತ್ತೆ ಆಂದೋಲನದಡಿ ರಚಿಸಿರುವ ತಂಡಗಳ ಮೂಲಕ ನಿಖರವಾಗಿ ಶಂಕಿತರನ್ನು ಗುರುತಿಸಬೇಕು. ರೋಗ ಖಚಿತಪಟ್ಟಲ್ಲಿ ಸಕಾಲದಲ್ಲಿ ಚಿಕಿತ್ಸೆ ನೀಡುವ ಮೂಲಕ ಪ್ರಕರಣಗಳ ಸಂಖ್ಯೆಯನ್ನು ಗಣನೀಯವಾಗಿ ನಿಯಂತ್ರಿಸಬೇಕು ಎಂದು ಜಿಪಂ ಸಿಇಓ ರಾಹುಲ್ ಶರಣಪ್ಪ ಸಂಕನೂರ ಅವರು ನಿರ್ದೇಶನ ನೀಡಿದರು.

ಕುಟುಂಬ ಕಲ್ಯಾಣ ತಾತ್ಕಾಲಿಕ ವಿಧಾನಗಳಲ್ಲಿ ಪುರುಷರಿಗಾಗಿರುವ ನೋ ಸ್ಕಾಲ್‌ಪೇಲ್ ವ್ಯಾಸೆಕ್ಟುಮಿಯನ್ನು ಹೆಚ್ಚು ಜಾಗೃತಿ ನೀಡುವ ಮೂಲಕಪುರುಷರುಭಾಗವಹಿಸುವಿಕೆಯೊಂದಿಗೆ ಶಸ್ತ್ರಚಿಕಿತ್ಸೆಯನ್ನು ನೆರವೇರಿಸಲು ತಿಳಿಸಿದರು.

ಸೊಳ್ಳೆಯಿಂದ ಹರಡುವ ಕಾಯಿಲೆಗಳ ನಿಯಂತ್ರಣಕ್ಕಾಗಿ ಅಂತರ ಇಲಾಖೆಗಳೊಂದಿಗೆ ಸಭೆ ಆಯೋಜಿಸಿ ರೋಗ ನಿಯಂತ್ರಣಕ್ಕೆ ಇನ್ನೂ ಹೆಚ್ಚಿನ ಕ್ರಮವಹಿಸುವಂತೆ ಅವರು ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ ರಮೇಶ್‌ಬಾಬು, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎನ್.ಬಸರೆಡ್ಡಿ, ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಆರ್.ಅನಿಲ್ ಕುಮಾರ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಮರಿಯಂಬಿ.ವಿ.ಕೆ., ಜಿಲ್ಲಾ ಮಲೇರಿಯಾ ನಿಯಂತ್ರಣಾಧಿಕಾರಿ ಡಾ.ಅಬ್ದುಲ್ಲಾ, ಜಿಲ್ಲಾ ಕುಟುಂಬ ಕಾರ್ಯಕ್ರಮ ಅನುಷ್ಠಾನಾಧಿಕಾರಿ ಡಾ.ಪೂರ್ಣಿಮ ಕಟ್ಟಿಮನಿ, ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ.ಇಂದ್ರಾಣಿ.ವಿ., ತಾಲ್ಲೂಕು ಆರೋಗ್ಯಾಧಿಕಾರಿಗಳಾದ ಡಾ.ಈರಣ್ಣ, ಡಾ.ಭರತ್, ಡಾ.ಅರುಣ್ ಸೇರಿದಂತೆ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಡಿಎನ್‌ಓ ಗಿರೀಶ್, ಎನ್‌ಸಿಡಿ ಕನ್ಸಲ್ಟೆಂಟ್ ಡಾ.ಜಮೀನಾ ತಾಜ್, ಡಿಪಿಎಂ ವೆಂಕೋಬ್ ನಾಯ್ಕ್, ಆರ್‌ಕೆಎಸ್‌ಕೆ ಜಿಲ್ಲಾ ಸಮಾಲೋಚಕ ಮನೋಹರ್, ಡಿಪಿಸಿ ಅರ್ಚನಾ, ಸಿಪಿಎಂ ಸುರೇಶ್ ಸೇರಿದಂತೆ ಇತರೆ ಅಧಿಕಾರಿಗಳು ಹಾಗೂ ಸಿಬ್ಬಂದಿಯವರು ಉಪಸ್ಥಿತರಿದ್ದರು.

# ವಾರ್ತಾ ಇಲಾಖೆ ಅಪ್ರೆಂಟಿಸ್ ತರಬೇತಿಗೆ ಅರ್ಜಿ ಅವಧಿ ವಿಸ್ತರಣೆ

**ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ವಿಶೇಷ ಘಟಕ ಹಾಗೂ ಗಿರಿಜನ ಉಪಯೋಜನೆಯಡಿ 12 ತಿಂಗಳ ಅಪ್ರೆಂಟಿಸ್ ತರಬೇತಿಗೆ ಅರ್ಜಿ ಸಲ್ಲಿಸಲು ಇದೇ ಡಿಸೆಂಬರ್ 26ರವರೆಗೆ ಅವಧಿ ವಿಸ್ತರಿಸಲಾಗಿದೆ.

ಬಳ್ಳಾರಿ ಜಿಲ್ಲೆಯ ಹಾಗೂ ಹೊರ ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಮೂಲ ಜಿಲ್ಲೆಯ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. ಮೂಲ ಜಿಲ್ಲೆಯಲ್ಲಿ ಅರ್ಹ ಅಭ್ಯರ್ಥಿಗಳು ದೊರೆಯದೇ ಇದ್ದಲ್ಲಿ ಹೊರ ಜಿಲ್ಲೆಯ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದು.

ಪತ್ರಿಕೋದ್ಯಮದಲ್ಲಿ ಪದವಿ ಅಥವಾ ಸ್ನಾತಕೋತ್ತರ ಪದವಿ ಪಡೆದವರು ಅರ್ಜಿ ಸಲ್ಲಿಸಬಹುದಾಗಿದ್ದು, ಅವರು ಪಡೆದಿರುವ ಅಂಕ, ಸಂದರ್ಶನದಲ್ಲಿ ಪಡೆದ ಅಂಕ ಹಾಗೂ ಕಂಪ್ಯೂಟರ್ ಬಳಕೆ ಜ್ಞಾನ ಮತ್ತು ಕನ್ನಡ ಭಾಷೆ ಬಳಕೆ ಪ್ರಬುದ್ಧತೆ ಆಧಾರದ ಮೇಲೆ ಮೆರಿಟ್ ಮತ್ತು ಸಂದರ್ಶನದ ಮೂಲಕ ಆಯ್ಕೆ ಮಾಡಿಕೊಳ್ಳಲಾಗುವುದು. ಆಯ್ಕೆಯಾದ ಅಭ್ಯರ್ಥಿಗಳಿಗೆ ಪ್ರತಿ ಮಾಹೆಯಾನ ರೂ.15 ಸಾವಿರ ಸ್ಟೈಫಂಡ್ ನೀಡಲಾಗುವುದು.

ಅರ್ಜಿ ಸಲ್ಲಿಸಲು ಅಭ್ಯರ್ಥಿಯು ಕರ್ನಾಟಕ ಕಾನೂನಾತ್ಮಕ ವಿಶ್ವವಿದ್ಯಾನಿಲಯದಿಂದ ಪತ್ರಿಕೋದ್ಯಮದಲ್ಲಿ ಪದವಿ ಅಥವಾ ಸ್ನಾತಕೋತ್ತರ ಪದವಿ ಪೂರ್ಣಗೊಳಿಸಿರಬೇಕು. 35 ವರ್ಷದೊಳಗಿರಬೇಕು. ಆಯ್ಕೆಯಾದ ಅಭ್ಯರ್ಥಿಗಳು ತರಬೇತಿ ಅವಧಿಯಲ್ಲಿ ಬೇರೆ ಉದ್ಯೋಗ ಮಾಡುವಂತಿಲ್ಲ. ಇಲಾಖೆಯಲ್ಲಿ ಈ ಹಿಂದೆ ತರಬೇತಿ ಪಡೆದವರು ಪುನಃ ಅರ್ಜಿ ಸಲ್ಲಿಸುವಂತಿಲ್ಲ. ನಿಗದಿತ ಅವಧಿಯ ನಂತರ ಬಂದ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ. ಆಸಕ್ತ ಅಭ್ಯರ್ಥಿಗಳು ಅರ್ಜಿಯೊಂದಿಗೆ ತಮ್ಮ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ, ಪದವಿ ಪ್ರಮಾಣ ಪತ್ರ, ಸ್ನಾತಕೋತ್ತರ ಪದವಿ ಪ್ರಮಾಣಪತ್ರ, ಜಾತಿ ಪ್ರಮಾಣಪತ್ರ, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಸೇರಿದಂತೆ ಕಂಪ್ಯೂಟರ್ ಜ್ಞಾನ ಹೊಂದಿರುವ ಕುರಿತ ಪೂರಕ ದಾಖಲೆಗಳನ್ನು ಲಗತ್ತಿಸಿ ದಿನಾಂಕ 26–12–2023 ರೊಳಗಾಗಿ ಹಿರಿಯ ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಜಿಲ್ಲಾಧಿಕಾರಿಗಳ ಕಚೇರಿ ಆವರಣ, ಬಳ್ಳಾರಿ ಈ ವಿಳಾಸಕ್ಕೆ ಸಲ್ಲಿಸಬೇಕು. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬಳ್ಳಾರಿ ಕಚೇರಿಗೆ ಸಂಪರ್ಕಿಸಲು ಜಿಲ್ಲಾ ವಾರ್ತಾಧಿಕಾರಿ ಜಡಿಯಪ್ಪ.ಜಿ ತಿಳಿಸಿದ್ದಾರೆ.

## ಜಿಲ್ಲೆಯಲ್ಲಿ ಡಿ.19ರಿಂದ ಡಿಪ್ಲೋಮಾ ಸೆಮಿಸ್ಟರ್‌ನ ಥಿಯರಿ ಪರೀಕ್ಷೆಗಳು ಕೇಂದ್ರಗಳ ಸುತ್ತ ನಿಷೇಧಾಜ್ಞೆ ಜಾರಿ:

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಲ್ಲಿ ಡಿ.19ರಿಂದ 29ರವರೆಗೆ ತಾಂತ್ರಿಕ ಪರೀಕ್ಷಾ ಮಂಡಳಿಯವರಿಂದ ಡಿಪ್ಲೋಮಾ ಸೆಮಿಸ್ಟರ್‌ನ ಥಿಯರಿ ಪರೀಕ್ಷೆಗಳು ನಡೆಯಲಿದ್ದು, ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯ ಆವರಣವನ್ನು ಸಿಆರ್‌ಪಿಸಿ ಕಲಂ 144ರ ಮೇರೆಗೆ ನಿರ್ಬಂಧಿತ ಪ್ರದೇಶವೆಂದು ಘೋಷಿಸಿ ಜಿಲ್ಲಾ ದಂಡಾಧಿಕಾರಿ ಆಗಿರುವ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಆದೇಶಿಸಿದ್ದಾರೆ.

ಜಿಲ್ಲೆಯ ಬಳ್ಳಾರಿ, ಕಂಪ್ಲಿ, ಸಿರುಗುಪ್ಪ, ಸಂಡೂರು ತಾಲ್ಲೂಕುಗಳಲ್ಲಿ ಈ ಪರೀಕ್ಷೆಗಳು ನಡೆಯಲಿದ್ದು, ಬೆಳಿಗ್ಗೆ 10 ಗಂಟೆಯಿಂದ ಸಂಜೆ 05.30ರವರೆಗೆ ಪರೀಕ್ಷಾ ಕೇಂದ್ರಗಳ ಸುತ್ತ–ಮುತ್ತ ಜೆರಾಕ್ಸ್ ಸೆಂಟರ್ ಮತ್ತು ಇಂಟರ್‌ನೆಟ್ ಸೆಂಟರ್‌ಗಳನ್ನು ಕಾರ್ಯನಿರ್ವಹಿಸದಂತೆ ಆದೇಶಿಸಿದ್ದು, ಸದರಿ ಪ್ರದೇಶದಲ್ಲಿ ಅನಧಿಕೃತ ವ್ಯಕ್ತಿ ಮತ್ತು ವ್ಯಕ್ತಿಗಳ ಗುಂಪುಗಳಿಗೆ ಪ್ರವೇಶ ನಿಷೇಧಿಸಲಾಗಿದೆ.

ಈ ಆದೇಶವು ಪರೀಕ್ಷೆಯ ಮೇಲ್ವಿಚಾರಣೆ ಕಾರ್ಯ ನಿರ್ವಹಿಸುವ ಸಿಬ್ಬಂದಿಯವರಿಗೆ ಅನ್ವಯಿಸುವುದಿಲ್ಲ ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.

# ಕುಷ್ಠರೋಗ ಪ್ರಕರಣ ಪತ್ತೆ ಅಭಿಯಾನ ಯಶಸ್ವಿಗೊಳಿಸಿ

## ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಸೂಚನೆ

**ಹಂಪಿ ಟೈಮ್ಸ್ ಬಳ್ಳಾರಿ**

ಇದೇ ಡಿ.27ರಂದು ಜ.11 ರ ವರೆಗೆ ಜಿಲ್ಲೆಯಲ್ಲಿ ನಡೆಯುವ ಕುಷ್ಠರೋಗ ಪ್ರಕರಣ ಪತ್ತೆ ಹಚ್ಚುವ ಅಭಿಯಾನವನ್ನು ಎನ್‌ಜಿಓ ಹಾಗೂ ಅಂತರ್ ಇಲಾಖೆಗಳ ಸಮನ್ವಯತೆಯಿಂದ ಯಶಸ್ವಿಗೊಳಿಸಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಸೂಚಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ಕುಷ್ಠರೋಗ ಪ್ರಕರಣ ಪತ್ತೆ ಹಚ್ಚುವ ಅಭಿಯಾನ ಕುರಿತ ಜಿಲ್ಲಾ ಮಟ್ಟದ ಸಭೆಯಲ್ಲಿ ಅವರು ಮಾತನಾಡಿದರು.

ಕುಷ್ಠರೋಗ ಸಾಂಕ್ರಾಮಿಕ ರೋಗವಾಗಿದ್ದು, ಇದು ಮೈಕೋಬ್ಯಾಕ್ಟೀರಿಯಂ ಲೆಪ್ರೈ ಎಂಬ ರೋಗಾಣುವಿನಿಂದ ಬರುತ್ತದೆ. ಇದು ಚಿಕಿತ್ಸೆ ಪಡೆಯದೇ ಇರುವ ಕುಷ್ಠರೋಗಿಯು ಕೆಮ್ಮಿದಾಗ, ಸೀನಿದಾಗ ಬರುವ ತುಂತುರು ಹನಿಗಳು ಉಸಿರಾಡುವ ಗಾಳಿಯ ಮೂಲಕ ಒಬ್ಬರಿಂದ ಒಬ್ಬರಿಗೆ ಹರಡುವಂತಹ ರೋಗವಾಗಿದ್ದು, ಪ್ರಾರಂಭಿಕ ಹಂತದಲ್ಲೇ ಪತ್ತೆ ಹಚ್ಚಿ ಚಿಕಿತ್ಸೆ ನೀಡುವುದರಿಂದ ಅಂಗವಿಕಲತೆ ಯಾಗುವುದನ್ನು ತಪ್ಪಿಸಬಹುದು ಎಂದು ಹೇಳಿದರು.



ಹೊಸದಾಗಿ ಕಂಡುಬರುವ ಕುಷ್ಠರೋಗ ಪ್ರಕರಣಗಳಿಗೆ ಉಂಟಾಗುವ ಅಂಗವಿಕಲತೆಯನ್ನು ಶೇಕಡವಾರು 10 ಲಕ್ಷ ಜನಸಂಖ್ಯೆಗೆ ಅನುಗುಣವಾಗಿ ಒಂದಕ್ಕಿಂತ ಕಡಿಮೆ ಮಾಡಲು ಮತ್ತು ಸುಪ್ತ ಕುಷ್ಠರೋಗ ಪ್ರಕರಣಗಳನ್ನು ಪ್ರಾರಂಭದ ಹಂತದಲ್ಲಿಯೇ ಪತ್ತೆ ಹಚ್ಚಲು ಡಿ.27ರಿಂದ ಜ.11ರವರೆಗೆ ನಡೆಯುವ ಕುಷ್ಠರೋಗ ಪ್ರಕರಣ ಪತ್ತೆ ಹಚ್ಚುವ ಅಭಿಯಾನವನ್ನು ಎನ್‌ಜಿಓ ಹಾಗೂ ವಿವಿಧ ಇಲಾಖೆಗಳ ಸಹಕಾರದೊಂದಿಗೆ ಯಶಸ್ವಿಗೊಳಿಸಬೇಕು ಎಂದು ಅಧಿಕಾರಿ/ಸಿಬ್ಬಂದಿಗಳಿಗೆ ಕರೆ ನೀಡಿದರು.

ಆಶಾ, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಪುರುಷ ಸ್ವಯಂಸೇವಕರು ಮನೆ–ಮನೆಗೆ ಭೇಟಿ ನೀಡಿ ಮನೆಯಲ್ಲಿರುವ 2 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರನ್ನು ತಪಾಸಣೆ ಮಾಡಿ ಕುಷ್ಠರೋಗದ ಬಗ್ಗೆ ಮಾಹಿತಿ ನೀಡಬೇಕು, ಶಂಕಿತ ಪ್ರಕರಣಗಳು ಕಂಡು ಬಂದಲ್ಲಿ ಅಂತಹವರನ್ನು ಸಾರ್ವಜನಿಕ ಆರೋಗ್ಯ ಕೇಂದ್ರಗಳ ತಜ್ಞ ವೈದ್ಯಾಧಿಕಾರಿಗಳ ಹತ್ತಿರ ರೆಫರಲ್ ಫಾರಂ ನೀಡಿ ತಪಾಸಣೆ ಮಾಡಿಸಿಕೊಳ್ಳಲು ಸಲಹೆ ಮಾಡಬೇಕು. ವೈದ್ಯಾಧಿಕಾರಿಗಳು ತಪಾಸಣೆ ಮಾಡಿ ಕುಷ್ಠರೋಗ ಎಂದು ದೃಢಪಡಿಸಿದ ಮೇಲೆ ಅಗತ್ಯ ಚಿಕಿತ್ಸೆ ನೀಡಬೇಕು ಎಂದು ಸೂಚಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ ರಮೇಶ್ ಬಾಬು ಅವರು ಮಾತನಾಡಿ, ಕುಷ್ಠರೋಗ ಪ್ರಕರಣ ಪತ್ತೆ ಹಚ್ಚುವ ಅಭಿಯಾನ ಕಾರ್ಯಕ್ರಮವನ್ನು ಜಿಲ್ಲೆಯ ಬಳ್ಳಾರಿ, ಸಿರುಗುಪ್ಪ, ಸಂಡೂರು ತಾಲೂಕುಗಳಲ್ಲಿ ಹಮ್ಮಿಕೊಳ್ಳಲಾಗಿದ್ದು, ಒಟ್ಟು 2,75,452 ಮನೆಗಳು ತಪಾಸಣಾ ಸಮೀಕ್ಷೆ ಮಾಡಲಾಗುವುದು, ಈ ತಪಾಸಣಾ ಸಮೀಕ್ಷೆ ಮಾಡಲು 1211 ತಂಡಗಳನ್ನು ರಚಿಸಲಾಗಿದ್ದು, ಒಂದು ತಂಡದಲ್ಲಿ ಆಶಾ ಕಾರ್ಯಕರ್ತೆಯರು ಅಥವಾ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಪುರುಷ ಸ್ವಯಂಸೇವಕರು ಇರುತ್ತಾರೆ. ಈ ತಂಡಗಳ ಮೇಲೆ 241 ಮೇಲ್ವಿಚಾರಕರನ್ನು ನೇಮಕ ಮಾಡಲಾಗಿದೆ. ಪ್ರಸ್ತುತ ಜಿಲ್ಲೆಯಲ್ಲಿ 86 ಪ್ರಕರಣಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

ಜಿಲ್ಲೆಯಲ್ಲಿರುವ ವಲಸೆ ಕಾರ್ಮಿಕರು ದುಡಿಯುವ ಪ್ರದೇಶಗಳಾದ ಇಟ್ಟಿಗೆ ಬಟ್ಟಿ, ಜಿಂಚೆ ಮಶಿನ್, ಸಿಮೆಂಟ್ ಬ್ರಿಕ್ಸ್, ರೈಸ್ ಮಿಲ್ ಇಂಡಸ್ಟ್ರಿಗಳು ಸೇರಿದಂತೆ ಇತರೆ 101 ಸ್ಥಳಗಳನ್ನು ಗುರುತಿಸಲಾಗಿದ್ದು, ಆರೋಗ್ಯ ಇಲಾಖೆಯ 10 ತಂಡಗಳು ಭೇಟಿ ನೀಡಿ ತಪಾಸಣಾ ಸಮೀಕ್ಷೆ ಮಾಡಲಿದ್ದಾರೆ. ಈ ತಂಡಗಳನ್ನು 5 ಮೇಲ್ವಿಚಾರಕರು ನಿಗಾವಹಿಸಿರುತ್ತಾರೆ ಎಂದರು.

ಮಹಾತ್ಮ ಗಾಂಧೀಜಿಯವರು ಕಂಡ ಕನಸು "ಕುಷ್ಠರೋಗ ಮುಕ್ತ ಭಾರತ" ಮಾಡಲು ಆರೋಗ್ಯ ಇಲಾಖೆ ತಂಡಗಳು ತಪಾಸಣೆಗಾಗಿ ಮನೆಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಾರ್ವಜನಿಕರು ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎನ್.ಬಸರೆಡ್ಡಿ, ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ಕೆ.ಜಿ.ವೀರೇಂದ್ರ ಕುಮಾರ್, ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಅನೀಲ್ ಕುಮಾರ್, ಜಿಲ್ಲಾ ಮಲೇರಿಯಾ ನಿಯಂತ್ರಣಾಧಿಕಾರಿ ಡಾ.ಅಬ್ದುಲ್ಲಾ, ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ.ಇಂದ್ರಾಣಿ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ವಿ.ಕೆ. ಮರಿಯಂಬಿ, ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯಕ್ರಮಾಧಿಕಾರಿ ಡಾ.ಪೂರ್ಣಿಮಾ ಕಟ್ಟಿಮನಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್. ದಾಸಪ್ಪನವರು ಸೇರಿದಂತೆ ಎಲ್ಲಾ ತಾಲ್ಲೂಕು ಆರೋಗ್ಯಾಧಿಕಾರಿಗಳು, ಆಡಳಿತ ವೈದ್ಯಾಧಿಕಾರಿಗಳು, ಶುಶ್ರೂಷಕರು ಮತ್ತು ಆಶಾಕಾರ್ಯಕರ್ತೆಯರು ಉಪಸ್ಥಿತರಿದ್ದರು.







Printed by: MANJUNATHA .H .B Published by: A. SHUBHA. Owned by: A. SHUBHA and Printed at: AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA